 ISBN Number: 978-93-342-6162-2

ಸಂಶೋಧನ ಕೀಲಿಕೈ

(ಸಂಶೋಧನ ತಾತ್ವಿಕತೆ ಕುರಿತ ಲೇಖನಗಳು)

ಸಂಪಾದಕರು

ಡಾ. ಸೈಯದ್ ಮುಯಿನ್

ಪ್ರೊ. ಶಪಾನಾ

ಸಂಶೋಧನ ಕೀಲಿಕೈ (ಸಂಶೋಧನ ತಾತ್ವಿಕತೆ ಕುರಿತ ಲೇಖನಗಳು)

ಸಂಪಾದಕರು

ಡಾ.ಸೈಯದ್ ಮುಯಿನ್

ಕನ್ನಡ ಸಹಾಯಕ ಪ್ರಾಧ್ಯಾಪಕರು

ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ, ಬೆಂಗಳೂರು

ಮತ್ತು

ಪ್ರೊ.ಶಪಾನಾ

ಮುಖ್ಯಸ್ಥರು, ಕನ್ನಡ ವಿಭಾಗ

ಹಸನಾತ್ ಮಹಿಳಾ ಕಾಲೇಜು, ಬೆಂಗಳೂರು

ಪ್ರಕಾಶಕರು : ಗೌಹರ್ ಪ್ರಕಾಶನ, ಬೆಂಗಳೂರು

ISBN Number: 978-93-342-6162-2

Page: 125

First Impression: 2025

@authors

Copies: e-copies

Size of the book: 1/8 dummy

ಬೆಲೆ: ರೂ. 100/-

ಮುಖಪುಟ ವಿನ್ಯಾಸ

ಮತ್ತು ಅಕ್ಷರ ಜೋಡಣೆ : ಗೌಹರ್ ಪ್ರಕಾಶನ

 ISBN Number: 978-93-342-6162-2

ಪರಿವಿಡಿ

೧. ಸಂಶೋಧನೆಗಳಲ್ಲಿ ಪ್ರವೃತ್ತಿ ಮತ್ತು ನೈತಿಕತೆ- ಡಾ. ಸೈಯದ್ ಮುಯಿನ್

೨. ಪ್ರೇತ (ಕುಳೆ) ಮದುವೆ- ಸುಮಿತಾ ಯನ್.ಕೆ,

೩. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪರಂಪರೆ ಪ್ರತಿರೋಧದ ಧಾರ್ಮಿಕ – ಸಂಘರ್ಷದ ನೆಲೆಗಳು–ಪ್ರಭಾವತಿ ಜೆ

೪. ಕುವೆಂಪು ಅವರ ಕಾನೂರು ಹೆಗ್ಗಡತಿಯಲ್ಲಿ ದಾರ್ಶನಿಕತೆ–ಅರುಣ.ಎಸ್

೫. ಸರಳ ಸಜ್ಜನಿಕೆಯ ವ್ಯಕ್ತಿತ್ವದ ಸಂಶೋಧಕ – ಬೆನೆಟ್ ಜಿ ಅಮ್ಮನ್ನ- ಸರಿತ ಮಾಬೆನ್

೬. ಬದುಕಿನಲ್ಲಿ ಹಾಸ್ಯ- ಕವಿತಾ. ಆರ್

೭. ಸಂಶೋಧನೆಯಲ್ಲಿ ಆಕರದ ಮಹತ್ವ- ಮೀನಾಕ್ಷಿ ಪಿ.

೮. ಸಂಶೋಧನೆಯ ಹಂತಗಳು- ಆಶಾ ಎ.ಎನ್

೯. ಸಂಶೋಧನ ಆಕರಗಳು: ಒಂದು ವಿವೇಚನೆ- ಪ್ರಮಿಳಾ ಬಾರ್ಕೂರು

೧೦. ಸಂಶೋಧನೆಯಲ್ಲಿ ಆಕರದ ಮಹತ್ವ- ಸುಮ ವೈ

 ISBN Number: 978-93-342-6162-2

ಸಂಶೋಧನೆಗಳಲ್ಲಿ ಪ್ರವೃತ್ತಿ ಮತ್ತು ನೈತಿಕತೆ

ಡಾ.ಸೈಯದ್ ಮುಯಿನ್
ಕನ್ನಡ ಸಹಾಯಕ ಪ್ರಾಧ್ಯಾಪಕ,
ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ,
ಬೆಂಗಳೂರು
ದೂರವಾಣಿ ಸಂಖ್ಯೆ: 9972925077
ಈ–ಅಂಚೆ: syedmuen@kristujayanti.com

ಸಂಶೋಧನೆಯ ನೈತಿಕ ಮಾನದಂಡಗಳು ಏನು ಎಂಬುದರ ಬಗ್ಗೆ ವ್ಯಾಪಕವಾದ ಸಮಸ್ಯೆಗಳಿವೆ ಅದರಲ್ಲಿ ಉದಾಹರಣೆಯಾಗಿ ಇದನ್ನು ಗಮನಿಸಬಹುದು. ಸಂಶೋಧನೆಯಲ್ಲಿ ನೈತಿಕತೆ ಎಂದರೆ ಸರಳವಾಗಿ ನಾವು ಆಯ್ಕೆ ಮಾಡಿಕೊಂಡಿರುವ ವಿಷಯದ ಬಗೆಗಿನ ಮಾಹಿತಿಯನ್ನು ಕೃತಿಚೌರ್ಯ ಮಾಡದಿರುವುದು ಮತ್ತು ಅನ್ಯ ಸಂಶೋಧಕನ ಸಂಶೋಧನೆಯ ಫಲಿತಗಳನ್ನು ಸುಳ್ಳಾಗಿಸದೆ ಇರುವುದು. ಅಂದರೆ ಇತರ ಸಂಶೋಧಕರಿಗಿಂತ ನನ್ನ ಸಂಶೋಧನೆ ಉತ್ತಮ ಎಂತಲೋ, ಅವರ ಸಂಶೋಧನಾ ವಿಧಾನಗಳನ್ನು ತಿರಸ್ಕರಿಸುವುದು ಸಂಶೋಧಕನ ನೈತಿಕ ವಿಚಾರಗಳಾಗಿವೆ.

ಸಂಶೋಧನೆಯಲ್ಲಿ ನೈತಿಕತೆಯ ಮಹತ್ವ

- ಜ್ಞಾನವನ್ನು ವಿಸ್ತರಿಸುವಂತಹ ಸಂಶೋಧನೆಯ ಗುರಿ ಹೊಂದಿರಬೇಕು.
- ಸಂಶೋಧಕರಲ್ಲಿ ಪರಸ್ಪರ ಗೌರವ ಮತ್ತು ನ್ಯಾಯಯುತವಾದಂತಹ ವಿಮರ್ಶೆ, ಪರಸ್ಪರ ಸಂಶೋಧನೆಗೆ ಅಗತ್ಯವಾದ ಸಹಕಾರ ನೀಡುತ್ತ, ಅವರವರ ಮೌಲ್ಯಗಳನ್ನು ವಿನಿಮಯಿಸಿಕೊಳ್ಳುವುದು. ಸಾಹಿತ್ಯಿಕ ಸಂಶೋಧನೆಯಲ್ಲಿ ಇಂತಹ ಅನ್ಯೋನ್ಯತೆ ಅನಿವಾರ್ಯವಾಗಿರುತ್ತದೆ.
- ತಮ್ಮ ಸಂಶೋಧನೆಯಿಂದ ಸತ್ಯವನ್ನು ಬೆಳಕಿಗೆ ತರುವುದಾಗಿದ್ದರು ಇಂತಹ ಸಂಶೋಧನೆಗಳು ಸಮಾಜಘಾತುಕವಾಗಿರಬಾರದು. ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಹೊಣೆಗಾರಿಕೆಯನ್ನು ಹೊಂದಿರಬೇಕು.

 ISBN Number: 978-93-342-6162-2

ಪ್ರಾಮಾಣಿಕತೆ ಮತ್ತು ಸಮಗ್ರತೆ

ಸಂಶೋಧನೆಯನ್ನು ಪ್ರಾಮಾಣಿಕವಾಗಿ ಪ್ರಕಟಗೊಳಿಸಬೇಕು. ನಾವು ಕೈಗೊಂಡಿರುವ ಸಂಶೋಧನ ವಿಧಾನ, ಮಾಹಿತಿ, ದತ್ತಾಂಶ, ಫಲಿತಗಳು ಇದಕ್ಕಿಂತ ಮುಂಚೆ ಪ್ರಕಟಿತವಾಗಿದ್ದರೆ ಅದರ ಮಾಹಿತಿಯನ್ನು ಪ್ರಾಮಾಣಿಕವಾಗಿ ಉಲ್ಲೇಖಿಸತಕ್ಕದ್ದು. ಯಾರನ್ನು ದಾರಿ ತಪ್ಪಿಸುವ ಕೆಲಸ ಮಾಡಬಾರದು. ತಮ್ಮ ಸಂಶೋಧನೆಯ ಫಲಿತಗಳನ್ನು ಉತ್ಪ್ರೇಕ್ಷೆ ಮಾಡುವುದಕ್ಕಿಂತ ಸರಳವಾಗಿ ಹೇಳುವುದು ಸೂಕ್ತ. ವಿಷಯದ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು ಅವಶ್ಯಕ. ಬದ್ಧತೆ ಮತ್ತು ಪ್ರಾಮಾಣಿಕತೆಯು ಸಂಶೋಧನಾ ಕ್ಷೇತ್ರದಲ್ಲಿ ಅತಿ ಜರೂರಾದ ಸಂಗತಿಗಳಾಗಿವೆ.

ಗೌಪ್ಯತೆ

ಆತ್ಮವಿಶ್ವಾಸದಿಂದ ಒದಗಿಸಲಾದ ಯಾವುದೇ ಮಾಹಿತಿಯನ್ನು ಗೌರವಿಸಬೇಕು ಮತ್ತು ವೈಯಕ್ತಿಕ ವಿಚಾರಗಳನ್ನು ಸಾರ್ವಜನಿಕವಾಗಿ ಸಂಶೋಧನೆಯ ಹೆಸರಲ್ಲಿ ಅನಾವರಣ ಮಾಡದಿರುವುದು ಸೂಕ್ತ. ಮಾಹಿತಿಯನ್ನು ಸಮಾಜದ ಮುಂದಿಡುವುದು ಅನಿವಾರ್ಯವಾದಲ್ಲೀ ಮಾಹಿತಿ ನೀಡಿದವರ ಹೆಸರು, ವಿವರಗಳನ್ನು ಗೌಪ್ಯವಾಗಿಡುವುದು ಅತ್ಯಾವಶ್ಯಕವಾಗಿದೆ.

ಬೌದ್ಧಿಕ ಸಂಪತ್ತಿಗೆ ಗೌರವ

ಇತರ ಸಂಶೋಧಕರು ಮಾಡಿರುವ ಸಂಶೋಧನೆಯ ವಿಷಯಗಳನ್ನು ಕೃತಿಚೌರ್ಯ ಮಾಡಬಾರದು ಅಥವಾ ನಕಲಿಸಬಾರದು. ಅವರ ವಿಷಯಗಳನ್ನು ನಮ್ಮ ಸ್ವ ವಾಕ್ಯಗಳಲ್ಲಿ ಪ್ರಸ್ತು ಪಡಿಸಬಾರದು. ಹಾಗೇನಾದರು ಬಳಸಿದರು ಅವರ ಅನುಮತಿ ಪಡೆಯಬೇಕು ಇಲ್ಲವೇ ಅವರ ಸಂಶೋಧನೆಯ ಆಭಾರವನ್ನು ತಮ್ಮ ಸಂಶೋಧನ ಭಾಗದಲ್ಲಿ ವ್ಯಕ್ತಪಡಿಸಬೇಕು. ಸಂಶೋಧನ ವಿಷಯಗಳು ಅಪ್ರಕಟಿತವಾಗಿದ್ದರು ಅದರ ಬಗ್ಗೆ ಮಾಹಿತಿ ನೀಡುವುದು ಸೂಕ್ತ.

ನೈತಿಕತೆಯು ಸಂಶೋಧನೆಯ ಗುಣಮಟ್ಟವನ್ನು ಸುಧಾರಿಸುವ ಜತೆಗೆ ಸಂಶೋಧಕನ ನೈತಿಕತೆಯನ್ನು ವೃದ್ಧಿಗೊಳಿಸುತ್ತದೆ. ಸಮಾಜದ ಪ್ರತಿ ತನ್ನ ಜವಾಬ್ದಾರಿಯನ್ನು ಅರಿತು ಸಮಾಜಕ್ಕೆ ಉಪಯುಕ್ತವಾದುದನ್ನೇ ಸಂಶೋಧನೆಯ ಫಲಿತಗಳ ರೂಪದಲ್ಲಿ ನೀಡಬಲ್ಲ.

ಕಾನೂನುಗಳ ಅರಿವು

ನಾವು ಯಾವುದೇ ಸಂಶೋಧನೆಯನ್ನು ಕೈಗೊಂಡಾಗ ಅದಕ್ಕಾಗಿ ಬಳಸಿಕೊಳ್ಳುವ ಮಾಹಿತಿಯ ಪಾರದರ್ಶಕತೆ ತುಂಬ ಅನಿವಾರ್ಯವಾದುದು. ಇಲ್ಲದಿದ್ದಲ್ಲೀ ಕೃತಿಚೌರ್ಯಕ್ಕೆ ಸಂಬಂಧಿಸಿದಂತೆ ಕಾನೂನು

 ISBN Number: 978-93-342-6162-2

ರೀತ್ಯ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಇಂತಹ ಘಟನೆಗಳು ನಡೆದು ಕಾನೂನು ಹೋರಾಟ ನಡೆಸುತ್ತಿರುವುದನ್ನು ಕಾಣಬಹುದು.

ಸಂಶೋಧನೆಗಾಗಿ ತಾನು ಬಳಸಿಕೊಂಡ, ಆಯ್ಕೆಮಾಡಿಕೊಂಡ ದತ್ತಾಂಶ, ಫಲಿತಗಳು, ಆಕರಗಳ ಮಾಹಿತಿಯನ್ನು ಮುಕ್ತವಾಗಿ ನೀಡಬೇಕು. ಇದರಿಂದ ಮುಂದಿನ ಸಂಶೋಧಕರಿಗೆ ಸಹಾಯವಾಗುತ್ತದೆ. ಇತರರಿಂದ ಬರುವ ಟೀಕೆ ಮತ್ತು ಸಲಹೆಗಳನ್ನು ಮುಕ್ತವಾಗಿ ಸ್ವೀಕರಿಸಬೇಕು.

ವಿಶ್ವವಿದ್ಯಾಲಯಗಳು ಈ ನೈತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಮಿತಿಯೊಂದನ್ನು ರೂಪಿಸಬೇಕಿದೆ. ಈ ನೈತಿಕ ಸಮಿತಿಗಳು ಸಂಶೋಧನ ಪ್ರಸ್ತಾಪಕ್ಕೆ ಬಂದ ವಿಷಯಗಳ ನೈತಿಕ ಸಮಸ್ಯೆಗಳನ್ನು ಕಂಡುಕೊಂಡು ಸಂಶೋಧನೆಗೆ ಅವಕಾಶ ಕಲ್ಪಿಸಬೇಕಾಗಿರುತ್ತದೆ. ಆದರೆ ಆಗುತ್ತಿರುವ ಸಂಶೋಧನ ವಿಷಯಗಳನ್ನು ಗಮನಿಸಿದಾಗ ಇಂತಹ ಯಾವುದೇ ಕಾರ್ಯಗಳಾಗುತ್ತಿಲ್ಲ ಎಂಬ ವಿಷಯ ಮನನವಾಗುತ್ತಿದೆ.

ಸಂಶೋಧನೆ ಎಂದರೆ ಹೊಸ ವಿಚಾರ, ತತ್ವಗಳ ಶೋಧನೆಯಾಗಿದೆ, ಆದರೆ ಕಳೆದ ಇಪ್ಪತ್ತು ವರ್ಷಗಳ ಸಾಹಿತ್ಯಿಕ ಸಂಶೋಧನೆಗಳನ್ನು ಗಮನಿಸಿದಾಗ ತುಂಬಾ ಜಾಳು ಜಾಳಾದ ವಿಷಯಗಳ ಆಯ್ಕೆ ಮಾಡಿಕೊಂಡು ಪದವಿಗಾಗಿ, ವೃತ್ತಿಗಾಗಿ, ಬಡ್ತಿಗಾಗಿ ನಾಮಕಾವಸ್ಥೆಯ ಸಂಶೋಧನೆಗಳನ್ನು ಮಾಡಲಾಗುತ್ತಿದೆ. ಸಾಹಿತ್ಯಿಕ ಸಂಶೋಧನೆಗಳಲ್ಲಿ ಮೊದಲೇ ಹತ್ತಾರು ಸಂಶೋಧನೆಗಳಾಗಿರುವ ಕವಿ, ಪಠ್ಯದ ಆಯ್ಕೆ ಮಾಡಿಕೊಂಡು ಅವರು ಇವರು ಹೇಳಿದ್ದನ್ನು, ವಾಕ್ಯಗಳನ್ನು ತಿರುಗು ಮುರುಗಾಗಿಸಿ ಹೊಸ ವಾಕ್ಯದ ಸೃಷ್ಟಿ ಮಾಡಿ ಪದವಿಗಳನ್ನು ಗಳಿಸುತ್ತಿರುವುದನ್ನು ಕಾಣಬಹುದು.

ಅದಲ್ಲದೆ ಪದವಿಯೇತರ ಸಂಶೋಧನೆಯ ವಿಷಯಗಳಿಗೆ ಬಂದಾಗ ಇಲ್ಲಿನ ಸಂಶೋಧಕರು ತಮ್ಮ ಜಾತಿ–ಮತ–ಧರ್ಮದ ಬಲೆಯಲ್ಲಿ ಸಿಲುಕಿ ತಮ್ಮ ಜ್ಞಾನದ ಹರಹನ್ನ ಸಂಕುಚಿತಗೊಳಿಸುತ್ತಿದ್ದಾರೆ. ಇತ್ತೀಚಿನ ಸಂಶೋಧನೆಗಳಲ್ಲಿ ನೈತಿಕ ಕಾಳಜಿಗಳೆನ್ನುವುದು ಒಂದಷ್ಟಿಲ್ಲ. ಸಮಾಜವನ್ನು ಒಡೆಯುವ, ಕೋಮುವಾದಕ್ಕೆ ಬೆಂಬಲ ಸೂಚಿಸುವಂತಹ ಸಂಶೋಧನೆಗಳನ್ನು ಹೊರತೆಗೆದು ಜಗಜ್ಜಾಹಿರ ಮಾಡಲಾಗುತ್ತದೆ. ಇತಿಹಾಸದ ಪುಟಗಳಲ್ಲಿ ಸೇರಿ ಹೋದ, ಘಟನೆಗಳು ನಡೆದ ಬಗ್ಗೆ ಖಚಿತ ಮಾಹಿತಿ ಪುರಾವೆಗಳಿಲ್ಲದೆ ಇರುವಂತಹ ಸಂದರ್ಭದಲ್ಲಿ ಅಂತೆ–ಕಂತೆಗಳ ಆಸರೆಯಲ್ಲಿ ಭ್ರಮಾಲೋಕದ ಅರಮನೆಯನ್ನು ಕಟ್ಟಿ ಮನಸ್ಸುಗಳನ್ನು ಒಡೆಯುವ ಕೆಲಸಗಳನ್ನು ಇತ್ತೀಚಿನ ಸಂಶೋಧಕರು ಮಾಡುತ್ತಿರುವ ಕೆಲಸ ಶೋಚನೀಯ.

 ISBN Number: 978-93-342-6162-2

ಸಂಶೋಧಕನು ಸಮಾಜಮುಖಿಯಾಗಿರಬೇಕು, ಸುಸ್ಥಿರ, ಸದೃಢ, ಆರೋಗ್ಯಕರ ಸಮಾಜಕ್ಕಾಗಿ ಚಿಂತನೆ ನಡೆಸಬೇಕು, ಕ್ರಿಯಾಶೀಲನಾಗಿರಬೇಕಾದ ಸಂಶೋಧಕ ಪ್ರತಿಯೊಂದು ವಿಷಯವನ್ನು ಚಿಕಿತ್ಸಕ ದೃಷ್ಟಿಯಿಂದಲೂ, ಉತ್ಸುಕತೆಯಿಂದ ಕಾಣುವುದು ಅವಶ್ಯಕ. ಸಂಶೋಧಕ ಒಂದು ಕ್ಷೇತ್ರಕ್ಕೆ ಅಂಟಿಕೊಳ್ಳದೆ ಪ್ರತಿ ಕ್ಷೇತ್ರದಲ್ಲೂ ಪಾರಂಗತನಾಗದಿದ್ದರು ಆ ಕ್ಷೇತ್ರದ ಬಗ್ಗೆ ಕನಿಷ್ಠ ಮಾಹಿತಿಯನ್ನಾದರು ಪಡೆದುಕೊಂಡಿರುವುದು ಅವಶ್ಯಕ.

ಸಂಶೋಧನೆಯು ಇಂದು ಪ್ರವೃತ್ತಿಯಾಗಿ ಬೆಳೆಯುವುದರ ಬದಲು ವೃತ್ತಿಗಾಗಿ, ಬಡ್ತಿಗಾಗಿ ಮಾಡಲಾಗುತ್ತಿದೆ. ಅನ್ವಯಿಕ ವಿಜ್ಞಾನಗಳಲ್ಲಿ ನಡೆಯುತ್ತಿರುವ ಸಂಶೋಧನೆಯ ಹೊರತಾಗಿ ಮಿಕ್ಕೆಲ್ಲ ಸಂಶೋಧನೆಗಳು ಸಮಾಜ, ಸಂಸ್ಕೃತಿಗೆ ಯಾವುದೇ ರೀತಿಯ ಕೊಡುಗೆಯನ್ನು ನೀಡುತ್ತಿಲ್ಲ. ಇಂದಿನ ಸಂಶೋಧಕರಲ್ಲಿ ಹೊಸ ವಿಚಾರಗಳ, ಹೊಸ ಸಿದ್ಧಾಂತಗಳನ್ನು ಹುಡುಕುವ, ಅಂತರ್-ಶಿಸ್ತೀಯ ಅಧ್ಯಯನದ ಕೊರತೆಯು ಎದ್ದು ಕಾಣುತ್ತೇವೆ. ತಾವು ಮಾಡುವ ಸಂಶೋಧನೆಯು ಇತರರಿಗೆ ಆಚಾರ್ಯ ಗ್ರಂಥವಾಗಿ, ಆಕರ ಗ್ರಂಥವಾಗಿ ರೂಪುಗೊಳಿಸುವಂತಹ ಶ್ರದ್ಧೆ, ಆಸಕ್ತಿ ಇಲ್ಲದಿರುವುದನ್ನು ಹಲವಾರು ವಿಶ್ವವಿದ್ಯಾಲಯಗಳಲ್ಲಿರುವ ಮಹಾಪ್ರಬಂಧಗಳನ್ನು ನೋಡಿದಾಗ ಸತ್ಯ ಬೆಳಕಿಗೆ ಬರುತ್ತದೆ. ಸಂಶೋಧನೆಯು ಕೇವಲ ಪದವಿಗಾಗಿ ನಡೆಸುವ ಕ್ರಿಯೆಯಾಗಿರದೆ ನಿರಂತರ ಪ್ರಕ್ರಿಯೆಯಾಗಿ ರೂಪುಗೊಳ್ಳಬೇಕು. ಪದವಿಗಾಗಿ ಮಾಡುವ ಸಂಶೋಧನೆಯು ಸಂಶೋಧನ ವಿಧಿ-ವಿಧಾನಗಳನ್ನು ಅರ್ಥ ಮಾಡಿಕೊಂಡು ಮುಂದೆ ಇನ್ನೂ ಹಲವು ಸಂಶೋಧನೆಗಳನ್ನು ಮಾಡುವುದಾಗಿರಬೇಕು. ನೈತಿಕ ವಿಷಯಗಳನ್ನು ಕುಟುಂಬ ಮತ್ತು ಸುತ್ತಮುತ್ತಲಿನ ಪರಿಸರವು ನೀಡುವುದು. ಇದರಿಂದ ಸಂಶೋಧಕನ ವೈಯಕ್ತಿಕ ಬೆಳವಣಿಗೆಯು ಸಮಗ್ರವಾಗಿ ನೈತಿಕಪೂರ್ಣವಾಗಿ ರೂಪುಗೊಳ್ಳುತ್ತದೆ.

ಪರಾಮರ್ಶನ ಗ್ರಂಥಗಳು:-

1. ಕನ್ನಡ ಸಂಶೋಧನ ಪ್ರಬಂಧಗಳು: ಸಂಗಮೇಶ ಸವದತ್ತಿಮಠ ಮತ್ತಿತರು, ವರ್ಗೀಗೃತ ಸೂಚಿ, ವಿದ್ಯಾನಿಧಿ ಪ್ರಕಾಶನ, ಗದಗ, 2009
2. ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ: ಸಂಗಮೇಶ ಸವದತ್ತಿಮಠ, ರೂಪರಶ್ಮಿ ಪ್ರಕಾಶನ, 2015
3. ಸಂಶೋಧನೆ: ಎಂ.ಎಂ ಕಲ್ಬುರ್ಗಿ,

 ISBN Number: 978-93-342-6162-2

4. ಶತಮಾನದ ಸಂಶೋಧನೆ: ಡಾ. ಎನ್.ಎಸ್ ತಾರಾನಾಥ್,

ಪ್ರೇತ (ಕುಳೆ) ಮದುವೆ

ಸುಮಿತಾ ಯನ್.ಕೆ,
ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ.ರಾಜೇಶ್ ಬೆಜ್ಜಂಗಳ
ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಭಾರತೀಯ ಸಂಸ್ಕೃತಿ ಒಂದು ನಂಬಿಕೆಯ ಆಧಾರದ ಮೇಲೆ ನೆಲೆಗೊಂಡಿದೆ ಎಂದರೆ ತಪ್ಪಾಗಲಾರದು. ಜಗತ್ತಿನ ಪುರಾತನ ನಾಗರಿಕತೆಗಳ ಇತಿಹಾಸದೊಳಗೆ ಇಣುಕಿ ನೋಡಿದರೆ ಅಲ್ಲಿ ಹಲವಾರು ಆರಾಧನೆಗಳು, ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು, ಕೆಲವೊಂದು ಪದ್ದತಿಗಳು ಕಾಣಲು ಕೇಳಲು ಸಿಗುತ್ತವೆ. ಆಧುನಿಕ ಚಿಂತನೆಯಲ್ಲಿ ಕೆಲವು ಪದ್ಧತಿಗಳು ಮರೆಯಾಗುತ್ತವೆ. ಅಂತಹ ಒಂದು ಪದ್ದತಿ " ಪ್ರೇತ ಮದುವೆ " ಇದು ತುಳುನಾಡಿನಲ್ಲಿದ್ದ ಒಂದು ವಿಚಿತ್ರ ಪದ್ದತಿ ಅಥವಾ ಒಂದು ನಂಬಿಕೆಯ ಆಧಾರದ ಮೇಲಿನ ಒಂದು ಪದ್ದತಿ ಎನ್ನಬಹುದು. ಇದು ಎರಡು ಆತ್ಮಗಳು ಅಥವಾ ಸತ್ತವರ ಆತ್ಮಗಳ ನಡುವಿನ ವಿವಾಹ.

ಸತ್ತ ಹಿರಿಯರನ್ನು ಭಕ್ತಿಯಿಂದ ಪೂಜಿಸುವ ಪದ್ಧತಿ ನಮ್ಮಲ್ಲಿ ಮಾತ್ರವಲ್ಲದೆ ದೇಶವಿದೇಶಗಳಲ್ಲೂ ಎಲ್ಲ ಧರ್ಮಗಳಲ್ಲೂ ಇದೆ. ಸತ್ತ ನಂತರ ಮನುಷ್ಯನಾತ್ಮಗಳು ಮೋಕ್ಷ ಪಡೆಯದೆ ಹೋದರೆ ಪ್ರೇತಗಳಾಗುತ್ತವೆ ಎಂಬ ನಂಬಿಕೆ ನಮ್ಮಲ್ಲಿದೆ. ಬದುಕಿನಲ್ಲಿ ಸ್ವಲ್ಪವಾದರೂ ಸಮಾಧಾನ, ತೃಪ್ತಿಗಾಗಿ ಕೆಲವೊಂದು ಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಮನುಷ್ಯ ರೂಡಿಸಿಕೊಂಡಿದ್ದಾನೆ. ಮನುಷ್ಯ ಸತ್ತ ಮೇಲೆ ಎಲ್ಲಿಗೆ ಹೋಗುತ್ತಾನೆ ಎಂಬ ಗೊಂದಲಗಳ ನಡುವೆ ಹುಟ್ಟಿರುವ ಒಂದು ನಂಬಿಕೆಯೇ ಪ್ರೇತಗಳು.

ಬಾಲ್ಯ, ಯೌವ್ವನ, ಗೃಹಸ್ಥ, ಮುಪ್ಪು ಇವು ಮನುಷ್ಯನ ಜೀವನದ ನಾಲ್ಕು ಅವಸ್ಥೆಗಳು. ಜೀವನದ ವಿವಿಧ ಹಂತಗಳಲ್ಲಿ ಪವಿತ್ರ ಆಚರಣೆಗಳನ್ನು ನಡೆಸಲಾಗುತ್ತದೆ. ಅದರಲ್ಲಿ ಒಂದು ಮದುವೆ. ಇದು ಸಾಮಾನ್ಯವಾಗಿ ಜೀವಂತ ವ್ಯಕ್ತಿಗಳ ನಡುವೆ ಏರ್ಪಡುವುದು ಸರ್ವೇ ಸಾಮಾನ್ಯ. ಒಂದು ಕುಟುಂಬದ ಗಂಡು ಇನ್ನೊಂದು ಕುಟುಂಬದ ಹೆಣ್ಣು ವಯಸ್ಸಿಗೆ ಬಂದು ಈ ಎರಡು ಕುಟುಂಬದ ನಡುವೆ ಗುರು ಹಿರಿಯರ ಒಪ್ಪಿಗೆ ಮತ್ತು

 ISBN Number: 978-93-342-6162-2

ಆಶೀರ್ವಾದದೊಂದಿಗೆ ಹಿರಿಯರು ನಿರ್ಣಯಿಸಿದಂತೆ ವಿಧಿವತ್ತಾಗಿ ಮಾಂಗಲ್ಯಧಾರಣೆ ಮಾಡಿಕೊಂಡು ಮುಂದಕ್ಕೆ ಸತಿ ಪತಿಗಳಾಗುವ ಪವಿತ್ರವಾದ ಬಂಧವೇ ಮದುವೆ ಅಂದರೆ ಗ್ರಹಸ್ಥಾಶ್ರಮ ಸ್ವೀಕರಿಸುವುದು.

ಆದರೆ ಪ್ರೇತ ಮದುವೆ ವಿಭಿನ್ನ, ವಿಚಿತ್ರ. ಇಲ್ಲಿ ಹರಯಕ್ಕೆ ಬಂದು ಸತ್ತು ಹೋದ ಎರಡು ಆತ್ಮಗಳ ನಡುವೆ ಮದುವೆ ಏರ್ಪಡುತ್ತದೆ. ಇದುವೇ ಪ್ರೇತ ಮದುವೆ. ಹರಯಕ್ಕೆ ಬಂದ ಗಂಡಿಗೋ ಅಥವಾ ಹೆಣ್ಣಿಗೋ ಮದುವೆಯಾಗುವ ಸಮಯಕ್ಕೆ ಹಲವಾರು ವಿಘ್ನಗಳು ಬರುತ್ತದೆ. ಮಾನಸಿಕ ಸ್ಥೈರ್ಯ ಕಡಿಮೆಯಾಗುತ್ತದೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಹೊರಟಾಗ ಅವರ ಅಣ್ಣನೋ, ಅಕ್ಕನೋ ಕುಟುಂಬದದ ಸಂಬಂಧಿಯೋ ಮದುವೆಯಾಗದೆ ಮೃತಪಟ್ಟಿದ್ದರೆ ಅವರ ಆತ್ಮವು ಇವರಿಗೆ ಉಪದ್ರ ಕೊಡುವ ಸಂಗತಿಯು ಗೋಚರಿಸುತ್ತದೆ. ಅಂದರೆ ಅತೃಪ್ತ ಆತ್ಮದಿಂದಾಗಿ ಎಂದು ತಿಳಿಯುತ್ತದೆ. ಆಗ ಸಂತ್ರಸ್ತ ಕುಟುಂಬವು ಮದುವೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಸೂಕ್ತವಾದ ಮೃತ ಹುಡುಗ ಅಥವಾ ಹುಡುಗಿಯನ್ನು ಹುಡುಕುತ್ತದೆ. ಹರಯಕ್ಕೆ ಬಂದು ಅಕಾಲಿಕ ಮರಣಕ್ಕೆ ತುತ್ತಾದ ವ್ಯಕ್ತಿ ಇದ್ದರೆ, ಇನ್ನೊಂದು ಕುಟುಂಬದಲ್ಲಿ ಅಂತಹ ವ್ಯಕ್ತಿ ಇದ್ದರೆ ಅವರ ನಡುವೆ ಮದುವೆ ಏರ್ಪಡಿಸಿ ಆ ಎರಡು ಆತ್ಮವನ್ನು ಸಂತೃಪ್ತಿ ಪಡಿಸಲು ಪ್ರಯತ್ನಿಸುವುದೇ ಪ್ರೇತ ಮದುವೆ. ಆಷಾಢ ಮಾಸದಲ್ಲಿ ಪ್ರೇತಗಳಿಗೆ ಮದುವೆ ಮಾಡಲಾಗುತ್ತಿದೆ.

ನಂಬಿಕೆಯ ಮಹತ್ವ

ಮದುವೆಯಿಲ್ಲದೆ ಚಿಕ್ಕವಯಸ್ಸಿನಲ್ಲಿ ಸಾವನ್ನಪ್ಪಿದ, ಅಗಲಿದ ಆತ್ಮಗಳಿಗೆ ತೃಪ್ತಿ ಮತ್ತು ಸಂಪೂರ್ಣತೆಯ ಭಾವವನ್ನು ತರುತ್ತದೆ ಎಂಬ ನಂಬಿಕೆಯ ಮೇಲೆ ಈ ಆಚರಣೆಯನ್ನು ಆಚರಿಸಲಾಗುತ್ತದೆ. ಇದು ಎರಡು ಬೇರೆ ಬೇರೆ ಕುಟುಂಬಗಳ ನಡುವೆ ಸಂಭಂದ ಏರ್ಪಟ್ಟು ಮುಂದಕ್ಕೆ ಅವರ ಎಲ್ಲ ಕಾರ್ಯಕ್ರಮಗಳು ಜೊತೆಯಾಗಿಯೇ ನಡೆಯುವಲ್ಲಿಯೂ ಸಹಕಾರಿ. ಎರಡು ಕುಟುಂಬಗಳ ನಡುವಿನ ಸಂಬಂಧಕ್ಕೆ ಸತ್ತವರ ಆತ್ಮಗಳು ಕೊಂಡಿಯಾಗಿವೆ. ಮುಂದೆ ಆ ಎರಡು ಕುಟುಂಬಗಳು ಪರಸ್ಪರ ಸಂಬಂಧಿಕರು. ಇದು ಕುಟುಂಬಿಕರಲ್ಲಿ ಅಗಲಿದ ವ್ಯಕ್ತಿಯಿಂದಾಗಿ ಇದ್ದಂತಹ ಬೇನೆ ಬೇಸರವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವಲ್ಲಿಯೂ ಸಹಕಾರಿಯದೆ ಎಂಬ ನಂಬಿಕೆಯಿದೆ.

ಪ್ರೇತ ವಿವಾಹದ ಇತರ ರೂಪಗಳು

ತುಳುನಾಡು ಆಚರಣೆಗೆ ಹೆಸರುವಾಸಿಯಾಗಿದೆ. ಪ್ರಕೃತಿಯಲ್ಲಿರುವ ಎಲ್ಲವನ್ನೂ ಗೌರವಿಸುತ್ತಾರೆ – ನೀರು, ಮರಗಳು, ಹಾವುಗಳು, ಕಲ್ಲುಗಳು, ಅಗಲಿದ ಆತ್ಮಗಳು, ಇತ್ಯಾದಿ. ಅತಿಮಾನುಷ ಶಕ್ತಿಗಳಿಗೆ ಅವರ

 ISBN Number: 978-93-342-6162-2

ಭಕ್ತಿಯು ಇಂದಿಗೂ ಜೀವಂತವಾಗಿದೆ. ಕುಟುಂಬದ ಪೂರ್ವಜರಿಗೆ ಅವರ ಗೌರವವು ಹಿಂದಿನ ವಿದೇಶಿ ಪ್ರಯಾಣಿಕರಿಂದ ಪ್ರಶಂಸಿಸಲ್ಪಟ್ಟಿದೆ. ಮುಖ್ಯವಾಗಿ ಮೃತರ ಆತ್ಮಗಳ ಉದ್ಧಾರವನ್ನು ಗಮನದಲ್ಲಿಟ್ಟುಕೊಂಡು ಕುಟುಂಬಕ್ಕೆ ಶಾಂತಿ ಸಿಗುವಂತೆ ಮಾಡುವ ಕುಳೆ ಮದುವೆ ಹಿಂದೆ ಚಾಲ್ತಿಯಲ್ಲಿತ್ತು. ತುಳುನಾಡಿನ ಜೊತೆಗೆ ಭಾರತದ ಇತರ ಭಾಗಗಳಲ್ಲಿಯೂ ಆಚರಣೆಯಲ್ಲಿದೆ. ಇದು ಪ್ರಪಂಚದಾದ್ಯಂತ ಆಚರಿಸಲ್ಪಟ್ಟ ಒಂದು ಸಂಪ್ರದಾಯವಾಗಿದೆ. ಬದುಕಿನಲ್ಲಿ ಸ್ವಲ್ಪವಾದರೂ ಸಮಾಧಾನ, ತೃಪ್ತಿಗಾಗಿ ಕೆಲವೊಂದು ಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಮನುಷ್ಯ ರೂಡಿಸಿಕೊಂಡಿದ್ದಾನೆ. ಮನುಷ್ಯ ಸತ್ತ ಮೇಲೆ ಎಲ್ಲಿಗೆ ಹೋಗುತ್ತಾನೆ ಎಂಬ ಗೊಂದಲಗಳ ನಡುವೆ ಹುಟ್ಟಿರುವ ಒಂದು ನಂಬಿಕೆಯೇ ಪ್ರೇತಗಳು. ಸತ್ತ ನಂತರ ಮನುಷ್ಯನಾತ್ಮಗಳು ಮೋಕ್ಷ ಪಡೆಯದೆ ಹೋದರೆ ಪ್ರೇತಗಳಾಗುತ್ತವೆ ಎಂಬ ನಂಬಿಕೆ ನಮ್ಮಲ್ಲಿದೆ. ಸತ್ತ ಹಿರಿಯರನ್ನು ಭಕ್ತಿಯಿಂದ ಪೂಜಿಸುವ ಪದ್ಧತಿ ನಮ್ಮಲ್ಲಿ ಮಾತ್ರವಲ್ಲದೆ ದೇಶವಿದೇಶಗಳಲ್ಲೂ ಎಲ್ಲ ರ್ಮಗಳಲ್ಲೂ ಇದೆ ತಮ್ಮದೇ ಕಲ್ಪನೆಯಲ್ಲಿ ಪ್ರೇತಗಳಿಗೆ ಒಂದು ರೂಪ ಆಕಾರ ನೀಡಿ ಗೌರವಿಸುತ್ತಾರೆ. ಸ್ವರ್ಗ ಮೋಕ್ಷಸಿಗದೇ ಅಲೆದಾಡುತ್ತಿರುವ ಅತೃಪ್ತ ಆತ್ಮಗಳು ಕುಟುಂಬದವರಿಗೆ ತೊಂದರೆ ಕೊಡುತ್ತದೆ ಎಂಬ ಭಯದಿಂದ ತಿಥಿ, ಬೊಜ್ಜ, ಗತಿಸಿದ ಹಿರಿಯರ ಗುಂಪಿಗೆ ಸೇರಿಸುವುದು ಮುಂತಾದ ಕ್ರಮಗಳನ್ನು ಮಾಡಿ ಅತೃಪ್ತ ಆತ್ಮಗಳನ್ನು ತೃಪ್ತಿಪಡಿಸಲಾಗುತ್ತದೆ.

ಪ್ರೇತ ಮದುವೆಯ ಕ್ರಮಗಳು

ನಿಜ ಮದುವೆ ರೀತಿಯಲ್ಲಿಯೇ ಪ್ರೇತಗಳ ಮದುವೆ ನಡೆಯುತ್ತದೆ ಜಾತಿ ಕುಲ ಗೋತ್ರ ನೋಡಿ ಸಂಬಂಧ ಬೆಳೆಸಲಾಗುತ್ತದೆ. ಹೆಣ್ಣು ನೋಡುವ ಶಾಸ್ತ್ರವರೂಪಚಾರಗಳ ಮಾತುಕತೆ ನಡೆಸಿ ಆಟಿ (ಆಶಾಡ) ತಿಂಗಳಲ್ಲಿ ಮದುವೆಗೆ ದಿನಾಂಕ ಗೊತ್ತು ಪಡಿಸುತ್ತಾರೆ. ಆಟಿ ತಿಂಗಳಲ್ಲಿ ರಾತ್ರಿ ವೇಳೆ ಹೆಣ್ಣಿನ ಮನೆಯಲ್ಲಿ ಮದುವೆ ನಡೆಯುತ್ತದೆ. ದಿಬ್ಬಣದ ಗಂಡಿನ ಕಡೆಯವರು ಹಿಂಗಾರ, ಧಾರೆಯ ಸೀರೆ, ರವಿಕೆ, ಕರಿಮಣಿ, ಕಾಲುಂಗುರ, ಬಳೆ, ಅರಶಿನ ಕುಂಕುಮ ಎಲ್ಲವನ್ನು ತರುತ್ತಾರೆ. ಎರಡು ಮಣೆಯಲ್ಲಿ ಬಾಳೆದಿಂಡು ಅಥವಾ ಬೈಹುಲ್ಲಿನಿಂದ ನಿರ್ಮಿಸಿದ ಆಕೃತಿಗಳನ್ನು ಇರಿಸಿ ಹಲಗೆಯಲ್ಲಿ ಅಕ್ಕಿ ಹುಡಿಯಿಂದ ಹೆಣ್ಣು ಗಂಡಿನ ಹೆಸರು ಬರೆದು ಆಕೃತಿಗಳನ್ನು ವಸ್ತ್ರಾಭರಣಗಳಿಂದ ಶೃಂಗರಿಸಿ ನೈಜ ಮದವೆ ರೀತಿಯಲ್ಲಿ ಮದುವೆ ಮಾಡಿಸುತ್ತಾರೆ. ನಂತರ ವಧು ವರರಿಗೆ ಎಲೆ ಹಾಕಿ ಊಟ ಬಡಿಸುತ್ತಾರೆ. ಇಬ್ಬರ ಎಲೆಯಿಂದ ಎಂಜಲು ಬದಲಾಯಿಸುತ್ತಾರೆ. ಆನಂತರ ನೆಂಟರಿಗೆ ಮದುವೆ ಊಟ ಪಡಿಸುತ್ತಾರೆ. ಎಲ್ಲವೂ ಮುಗಿದ ಬಳಿಕ ಗಂಡನ ಕಡೆಯವರು ಗಂಡು ಹೆಣ್ಣಿನ ಆಕೃತಿಯನ್ನು ಗಂಡಿನನ ಮನೆಗೆ ತಂದು ದೈವದೇವರಿಗೆ ಪ್ರಾರ್ಥನೆ ಸಲ್ಲಿಸಿ ಎರಡು ಆಕೃತಿಗಳ ಉಡುಪನ್ನು ಬಿಚ್ಚಿ ಕೊಠಡಿಯಲ್ಲಿ ಹಾಕುತ್ತಾರೆ. ಈ ಆಚರಣೆಯನ್ನು ಆಯಾ ಪ್ರದೇಶಗಳ ಕ್ರಮಕನುಗುಣವಾಗಿ ನಡೆಸಲಾಗುತ್ತದೆ.

 ISBN Number: 978-93-342-6162-2

ಭೂತಾರಾಧನೆ ದೈವರಾಧನೆ ನಾಗಾರಾಧನೆ ಇಂತಹ ಆರಾಧನೆಗಳ ನಂಬಿಕೆಯಿಂದಲೇ ಮನೆಮಾತಾಗಿರುವ ಕರಾವಳಿಯ ಇನ್ನೊಂದು ವಿಶೇಷ ಎಂದರೆ ಪ್ರೇತಗಳ ಮದುವೆ. ಆಷಾಢ ಮಾಸದಲ್ಲಿ ಪ್ರೇತಗಳಿಗೆ ಮದುವೆ ಮಾಡುತ್ತಾರೆ.

ತಮ್ಮ ಮನೆಯಲ್ಲಿ ನಡೆಯುವ ಶುಭ ಕಾರ್ಯಕಾಗಲಿ ಅಥವಾ ತಮ್ಮ ಕುಟುಂಬದ ಮುಂದಿನ ಪೀಳಿಗೆಯಾಗಲಿ ಯಾವುದೇ ತೊಂದರೆ ಭಾರದಿರಲಿ ಎಂಬುದು ಪ್ರಯುಕ್ತ ಮದುವೆಯ ಮೂಲ ಉದ್ದೇಶ. ಮದುವೆಯಾಗದೆ ಸತ್ತವರು ಅತೃಪ್ತ ಆತ್ಮಗಳಾಗಿ ತಿರುಗುತ್ತಿರುತ್ತಾರೆ ಎಂಬುವುದು ನಂಬಿಕೆ. ಪ್ರೇತ ಮದುವೆ ಮಾಡಿಸಿದ ಮೇಲೆ ಅತೃಪ್ತ ಆತ್ಮ ಸಂತೃಪ್ತ ಆಗುವ ಮೂಲಕ ಮನೆಯವರಿಗೆ ಉಪದ್ರವ ನಿಲ್ಲುವುದು ಎಂಬ ನಂಬಿಕೆ. ಒಟ್ಟಿನಲ್ಲಿ ಇದೊಂದು ನಂಬಿಕೆಯ ಮೇಲಿನ ಆಚರಣೆ ಎನ್ನಬಹುದು.

ಆಕರ ಗ್ರಂಥಗಳು:

೧. ಬಂಟರು ಒಂದು ಸಮಾಜೋ – ಸಾಂಸ್ಕೃತಿಕ ಅಧ್ಯಯನ – ಡಾ. ಇಂದಿರಾ ಹೆಗ್ಗಡೆ

೨. ಅರೋಗ್ಯ ಮತ್ತು ಅನಾರೋಗ್ಯ ಬಗ್ಗೆ ಮೂಢನಂಬಿಕೆಗಳು – ಡಾ ಯಂ ಬಿ ರೇಣುಕಾರ್ಯ

೩. ಮದುವೆ – ಡಾ ಶ್ರೀನಿವಾಸ್

೪. ಮಬ್ಬಿನಿಂದ ಇಬ್ಬನಿಗೆಸಿದ್ಧರಾಮಯ್ಯ ಎಸ್ ಜಿ

೫. ಭಾರತೀಯ ಇತಿಹಾಸ ಪುರಾಣಗಳುಥಥಿ ನಾರಾಯಣಾಚಾರ್ಯ ಕೆ ಎಸ್ –ಸಾಹಿತ್ಯ ಪ್ರಕಾಶನ

೬. ಪ್ರಾಚೀನ ಭಾರತದಲ್ಲಿ ಶೂದ್ರರು – ಶರ್ಮ ಆರ್ ಎಸ್

೭. ಪ್ರಾಚೀನ ಭಾರತವೆಂಬ ಅದ್ಭುತ (ಖಿ�川 ತಿಶಟಜಜಡಿ ಖಿಚಿಣ ಘಚಿ �I(ಟಜುಚಿ)– ಬಾಶಮ್ ಎ ಎಲ್

೮. ಪೂರ್ವೇತಿಹಾಸ ಇರ್ಫಾನ್ ಹಬೀಬ್

೯. ಭಾರತದ ಹಳ್ಳಿಗಳು – ರವೀಂದ್ರ ಧನವಂತ ಹಳಿಂಗಳಿ

೧೦. ಕರ್ನಾಟಕದ ಸಾಂಸ್ಕೃತಿಕ ಇತಿಹಾಸ : ಆಯ್ದ ಟಿಪ್ಪಣಿಗಳು – ಪ್ರಭಾಕರ ರಾವ್ ಕೆ

೧೧. ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ–ಕೊಸಾಂಬಿ ಡಿ ಡಿ

 ISBN Number: 978-93-342-6162-2

೧೨. ಭಾರತೀಯ ಸಾಂಸ್ಕೃರಿಕ ಅಸ್ಮಿತೆ – ಪ್ರೇಮಶೇಖರ – ಸಾಹಿತ್ಯ ಪ್ರಕಾಶನ

೧೩. ಬೂದಿಯಾಗದ ಕೆಂಡ – ಇದು ಹೊಲೆ ಮಾದಿಗರ ಪಾಡು – ವಿಜಯಕುಮಾರ್ ಸಿಗರನಹಳ್ಳಿ

೧೪. ಬಾಳಿಗೊಂದು ನಂಬಿಕೆ – ಡಿ.ವಿ.ಜಿ – ಡಿ ವಿ ಜಿ –ಸಾಹಿತ್ಯ ಪ್ರಕಾಶನ

೧೫. ಪಿರಕೆದ ಬಂಟರ್ – ಬಿ. ಸಚ್ಚಿದಾನಂದ ಹೆಗ್ಡೆ (ತುಳು ಕಾದಂಬರಿ)

೧೬. ತುಳು ನುಡಿ ಸಂಸ್ಕೃತಿ – ಡಾ ಹರಿಕೃಷ್ಣ ಭರಣ್ಯ

೧೭. ಕಳಸೆ – ಡಾ ದುಗ್ಗಪ್ಪ ಕಜೆಕಾರ್

 ISBN Number: 978-93-342-6162-2

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪರಂಪರೆ ಪ್ರತಿರೋಧದ ಧಾರ್ಮಿಕ – ಸಂಘರ್ಷದ ನೆಲೆಗಳು

ಪ್ರಭಾವತಿ ಜೆ

ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ. ರಾಜೇಶ್ ಬೆಜ್ಜಂಗಳ

ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪರಂಪರೆ ಪ್ರತಿರೋಧದ ಧಾರ್ಮಿಕ ಸಂಘರ್ಷದ ನೆಲೆಯ ಅಂಶಗಳು ಪ್ರಮುಖವಾಗಿ ಕಾಣಬರುತ್ತದೆ. ಧರ್ಮ ಸಾಮಾಜಿಕ ಸಮಸ್ಯೆಗಳ ಮೇಲೆ ಬೀರುವ ಪ್ರಭಾವ ಪರಂಪರಾಗತ ಸಾಂಪ್ರದಾಯಿಕ ನಿಲುವುಗಳು ಮತ್ತು ಅವನ್ನು ಪ್ರತಿರೋಧಿಸುವ ಹೊಸ ಪೀಳಿಗೆಯ ಪಾತ್ರಗಳ ಚರ್ಚೆಯನ್ನು ಮಾಡಲಾಗುತ್ತದೆ ಸಾಂಪ್ರದಾಯಿಕ ಒಪ್ಪಿತ ಮೌಲ್ಯಗಳನ್ನು ವಿರೋಧಿಸುವ ಅಥವಾ ಧಿಕ್ಕರಿಸುವ ಅಥವಾ ಪ್ರಶ್ನಿಸುವ ಸಂದರ್ಭದಲ್ಲಿ ಉಂಟಾಗುವ ಎದುರಾಗುವ ಪಲ್ಲಟಗಳು ಮತ್ತು ಸಮಸ್ಯೆಗಳ ಚರ್ಚೆಯನ್ನು ಮಾಡಲಾಗುತ್ತದೆ. ಧರ್ಮ ಧಾರ್ಮಿಕ ಸ್ವರೂಪ ಹಾಗೂ ಅದರ ವ್ಯಾಪ್ತಿ ಸಮಾಜದ ಮೇಲೆ ಬೀರಿದ ಋಣಾತ್ಮಕ ಪರಿಣಾಮಗಳು ಚರ್ಚೆ ಮಾಡಬೇಕಾಗುತ್ತದೆ ಇಲ್ಲಿ ಪ್ರಮುಖವಾಗಿ ಸರಸಮ್ಮನ ಸಮಾಧಿ ಮತ್ತು ಚಿಗುರಿದ ಕನಸು ಕಾದಂಬರಿಯನ್ನು ಹಾಗೂ ಕನ್ಯಾ ಬಲಿ ಮರಳಿ ಮಣ್ಣಿಗೆ ಮೂಕಜ್ಜಿಯ ಕನಸುಗಳು ಮುಂತಾದವು ನೋಡಬಹುದಾಗಿದೆ ಪರಂಪರೆಯ ಮಾನವ ಬದುಕು ರೂಡಿಸಿಕೊಂಡ ಒಂದೇ ಅವಿಚಿನ್ನ ನಿರಂತರ ಕ್ರಮಾನುಗತ ವಿಕಾಸದ ಮುಂದುವರಿಕೆಯನ್ನು ಸೂಚಿಸುತ್ತದೆ ಸಂಸ್ಕೃತಿ ಆಚಾರ ವಿಚಾರ ರೀತಿ ನೀತಿ ಸಂಪ್ರದಾಯಿಕ ವಿಷಯಗಳು ಇದರ ಅಂತರ್ಗತ ಅಂಶವಾಗಿದೆ ಶತ ಶತಮಾನಗಳಿಂದ ಹಿಡಿದು ಪ್ರಸ್ತುತ ವರೆಗೂ ಮನುಷ್ಯನ ಸಾಮುದಾಯಿಕ ಬದುಕಿನಲ್ಲಿ ವಿಶೇಷವಾಗಿ ವ್ಯಾಪಿಸಿಕೊಂಡು ಬಂದಿರುವ ಮಾನವನ ಸಮಸ್ತ ಅಭಿವ್ಯಕ್ತಿ ಮತ್ತು ಸಮಸ್ತ ನಡವಳಿಕೆಗೆ ಪರಂಪರೆ ಆಗಿದೆ ಈ ಪರಂಪರೆಯನ್ನು ರೂಪಿಸಿರುವುದು ಮೌಲ್ಯಗಳು ಸಂಸ್ಕೃತಿಯೊಂದಿಗೆ ಸಾಮಾಜಿಕ ರೀತಿ ನೀತಿಗಳು ಸಾಂಪ್ರದಾಯಿಕ ನಿಯಮಗಳು ಮೌಲ್ಯಗಳ ರೂಪದಲ್ಲಿ

 ISBN Number: 978-93-342-6162-2

ಪ್ರತಿಫಲಿತವಾಗುತ್ತದೆ ಹೀಗೆ ಪರಂಪರೆ ಸಂಸ್ಕೃತಿ ಮೌಲ್ಯಗಳು ಪರಸ್ಪರ ಪ್ರತ್ಯೇಕಿಸಲಾರದಷ್ಟು ಹತ್ತಿರವಾಗಿ ಹೊಂದಿಕೊಂಡಿದೆ ವ್ಯಕ್ತಿಯ ಜೀವ ವಿಧಾನಕ್ಕೆ ಆಧಾರವಾಗಿ ಪರಂಪರೆಯು ರೂಡಿಸಿಕೊಂಡು ಬಂದ ಮೌಲ್ಯಗಳು ವಿಘಟನೆಗೆ ಒಳಪಡದೆ ಹಾಗೆಯೇ ಸ್ಥಿರವಾಗಿ ಉಳಿಯುವುದಿಲ್ಲ ನಿರ್ದಿಷ್ಟ ಜೀವನ ವಿಧಾನ ಮತ್ತು ದೃಷ್ಟಿಗಳು ರೂಪಿಸಿದ ಈ ಮೌಲ್ಯ ಸಂಘಟನೆಯ ಕಾಲಿಕ ಅವಧಿ ಅಥವಾ ಯುಗದ ಹೊಸತು ಹಳೆಯದರ ಕೊಂಡಿಯಾಗಿದೆ ಅನಾದಿಕಾಲದಿಂದಲೂ ಸಂಯಮ ತಾಳ್ಮೆ ಹೊಂದಾಣಿಕೆಯಂತಹ ಗುಣಗಳನ್ನು ಸ್ತ್ರೀಯರೇ ಹೆಚ್ಚಾಗಿ ಪಾಲಿಸಿಕೊಂಡು ಬಂದಿದ್ದಾರೆ ಆದರೆ ಅನ್ಯಾಯ ಹಿಂಸೆ ಹೆಚ್ಚಾದಂತೆ ಕಂಡು ಬಂದಾಗ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಪುರುಷ ಪ್ರಧಾನ ಸಮಾಜದ ವಿರುದ್ಧ ಬಂಡೆದ್ದ ಸ್ತ್ರೀಯರನ್ನು ಸಮಾಜದಲ್ಲಿ ಕಾಣಬಹುದು ಸರಸಮ್ಮನ ಸಮಾಧಿ ಕಾದಂಬರಿಗು ನಾಲ್ಕು ಕುಟುಂಬಗಳ ಕಥೆಯನ್ನು ಒಳಗೊಂಡಿದೆ ಜಾನಕಿ ಮತ್ತು ನಾಗವೇಣಿಯವರು ಸಂಯಮ ಮನೋಭಾವದವರಾಗಿದ್ದು ಗಂಡನ ದೌರ್ಜನ್ಯವನ್ನು ಪ್ರತಿಭಟಿಸಲಾಗದೆಯೇ ಮೌನವಾಗಿ ಸಹಿಸಿಕೊಳ್ಳುತ್ತಾರೆ ಆದರೆ ಸುನಾಲಿನಿ ಅಣ್ಣಪ್ಪ ಕಂತಿಯ ಹೆಂಡತಿ ಅವರದ್ದು ಆರ್ಥಿಕವಾಗಿ ಸುಭದ್ರವಾದ ಕುಟುಂಬವಾಗಿತ್ತು ಆದರೆ ಅವರ ದಾಂಪತ್ಯ ಜೀವನವು ಸಾಮರಸ್ಯದ ಜೀವನದಿಂದ ಕೂಡಿರದೆ ಮಾನಸಿಕವಾಗಿ ಹಿಂಸೆಗೆ ಒಳಗಾಗಿತ್ತು ಹೆಂಡತಿ ಬಯಸುವ ಗಂಡನ ಪ್ರೀತಿಯನ್ನು ಹೊರತುಪಡಿಸಿ ಉಳಿದವೆ ಎಲ್ಲವೂ ಸುನಾಲಿಗೆ ಇತ್ತು ಆದರೆ ಅವಳಿಗೆ ನಿರರ್ಥಕವಾಗಿರುತ್ತಿತ್ತು.

ಅಣ್ಣಪ್ಪ ಕಮ್ತಿಯ ವ್ಯಾಪಾರಿಯಾಗಿದ್ದು ವ್ಯವಹಾರಿಕ ಬುದ್ಧಿಯನ್ನು ಹೊಂದಿದ್ದನು. ತನ್ನನ್ನೇ ನಂಬಿ ಬಂದಂತಹ ಹೆಂಡತಿಯ ಮನಸ್ಸನ್ನು ಒಮ್ಮೆಯೂ ಅರಿಯಲು ಪ್ರಯತ್ನಿಸಿದವನಲ್ಲ ದುಡ್ಡಿದ್ದರೆ ಸಾಕು ಬೇರೇನು ಬೇಕಾಗಿಲ್ಲ ದುಡ್ಡಿನಿಂದ ಎಲ್ಲವೂ ದೊರೆಯುತ್ತದೆ ಎಂಬ ಅಹಂ ಅನ್ನು ಒಂದಿದ್ದನು ತನ್ನನ್ನೇ ನಂಬಿ ಬಂದಂತಹ ಹೆಂಡತಿಯ ಮನಸ್ಸನ್ನು ಅರಿತು ನಡೆಯದವನು ಇವನು ದುಡ್ಡಿನಿಂದ ಎಲ್ಲವೂ ದೊರೆಯುತ್ತದೆ ಎಂಬ ಅಹಂಕಾರದಿಂದಲೇ ವರ್ತಿಸುತ್ತಿದ್ದನು ಮಾಗಿಯಾದ ಹೆಂಡತಿ ಗಂಡನಿಂದ ಏಟು ತಿನ್ನುವುದಿಲ್ಲ ಎಂಬ ನಾಣ್ಣುಡಿಯು ಪುರುಷ ಪ್ರಧಾನ ವ್ಯವಸ್ಥೆಯನ್ನೇ ಸಮರ್ಥಿಸುತ್ತದೆ ಆದರೆ ಸ್ವಾಭಿಮಾನಿಯಾದ ಸುನಾಲಿನಿ ಗಂಡನಿಂದ ದುಡ್ಡನ್ನು ಬಯಸಿದವಳಲ್ಲ ಅವನಿಂದ ನಿರ್ಮಲವಾದ ಪ್ರೀತಿಯನ್ನು ಬಯಸಿದ್ದಳು ಅದು ಈಡೇರದಿದ್ದಾಗ ಅವಳ ದಾಂಪತ್ಯ ಜೀವನವು ವಿಷಮಯವಾಗಿ ಮಾರ್ಪಾಡುತ್ತದೆ ಗಂಡ ಹೆಂಡಿರದು ಪರಸ್ಪರ ವಿರೋಧ ಸ್ವಭಾವವಾಗಿತ್ತು ಒಬ್ಬರಿಗೊಬ್ಬರು ಒಂದೇ ಕೊಂಡು ಜೀವನ ಸಾಗಿಸಲು ಪ್ರಯತ್ನಿಸಲೇ ಇಲ್ಲ ಇದರಿಂದ ಅವರಿಬ್ಬರ ಜೀವನ ಮಾರ್ಗವು ಬೇರೆ ಬೇರೆ ಆಗುತ್ತದೆ ಪರಸ್ಪರ ಇಬ್ಬರು ಒಬ್ಬರ ಬಗೆಗೆ ಮತ್ತೊಬ್ಬರು ಅಪಾರ್ಥವನ್ನು ಹೊಂದಿದ್ದರು, ಸುನಾಮಿನಿಗೆ ತಾನು ಓದಿದವಳು ಎಂಬ ಅಹಂಕಾರವಿದೆ ಎಂದು ಅಣ್ಣಪ್ಪ ಕಂತಿ

 ISBN Number: 978-93-342-6162-2

ಅಂದುಕೊಂಡಿದ್ದನು ಅಣ್ಣಪ್ಪ ಕಂತಿಗೆ ದುಡ್ಡಿನ ಮದ ಇದೆ ಎಂದು ಸುನಾಲಿನಿ ಭಾವಿಸಿದ್ದಳು ಪರಸ್ಪರ ಸಮಾಲೋಚನೆ ಮಾಡಿದವರಲ್ಲ ಸಮಾಧಾನವಾಗಿ ಕುಳಿತು ಸಮಸ್ಯೆಯನ್ನು ಬಗೆಹರಿಸಲು ಯತ್ನಿಸಲು ಇಲ್ಲ ಮದುವೆ ಎಂಬುದು ಕೇವಲ ಗಂಡು ಹೆಣ್ಣುಗಳ ಮಿಲನದಿಂದ ಪರಿಪೂರ್ಣವಾಗುವುದಿಲ್ಲ ಅದಕ್ಕೆ ಅರ್ಥ ಬರಬೇಕಾದರೆ ಅವರಿಬ್ಬರ ಮನಸ್ಸು ಒಂದಾಗಬೇಕು ಒಬ್ಬರಿಗೊಬ್ಬರು ಮನಸ್ಸು ದುಡಿಯುತ್ತಿರಬೇಕು ಅಂದಾಗ ಮಾತ್ರ ಕುಟುಂಬವು ನೆಮ್ಮದಿಯಿಂದ ಇರಲು ಸಾಧ್ಯವಾಗಿರುತ್ತದೆ ಎಂಬುದರ ಚಿತ್ರಣವು ಕಾಣುತ್ತದೆ.

ಈ ಕಾಲದಲ್ಲಿ ಜೀವನವು ಅಸ್ತವಸ್ತವಾಗುವುದು ಮಾತ್ರವಲ್ಲ ವ್ಯಕ್ತಿ ವ್ಯಕ್ತಿಗಳ ನಡುವೆ ಸಂಘರ್ಷ ಉಂಟಾಗುತ್ತದೆ ಕೆಲವೊಮ್ಮೆ ಅದು ನಿಮ್ಮಾತ್ಮಕವಾಗಿಯೂ ಪ್ರಕಟವಾಗುತ್ತದೆ ಸಂವೇದನ ಯಾಗಿಯೂ ಕಾಣಿಸಿಕೊಳ್ಳುತ್ತದೆ ಈ ಸಂಘರ್ಷದಿಂದ ಉಂಟಾಗುವ ಪ್ರತಿರೋಧ ನಮ್ಮ ಪರಂಪರಾಗತ ಮೌಲ್ಯ ಆಚಾರ ವಿಚಾರಗಳ ಪುನರ್ ಮೌಲ್ಯಮಾಪನಕ್ಕೆ ಮಾನವೀಯ ಸಂವೇದನೆಗೂ ಒಳಗಾಗುತ್ತದೆ ಭವಿಷ್ಯದತ್ತ ಹೆಜ್ಜೆ ಇಡುವ ಒಂದು ಕ್ರಿಯಾ ಪರಂಪರೆ ಎಂಬ ನಿರ್ವಚನಕ್ಕೆ ಒಳಗಾಗುತ್ತದೆ ಇದು ಮನುಷ್ಯನ ಮೌಲ್ಯ ಪ್ರಜ್ಞೆಯಲ್ಲಾದ ಬದಲಾವಣೆಯೇ ಹೊರತು ಮೂಲಭೂತ ಮೌಲ್ಯಗಳ ಬದಲಾವಣೆ ಅಲ್ಲ ಎಂಬುದು ಗಮನಾರ್ಹ ಪರಂಪರೆಯು ಹುಟ್ಟಿಸಿಕೊಂಡ ಅರ್ಥಹೀನ ಆಚರಣೆಯನ್ನು ಅವುಗಳ ಬಗೆಗಿನ ಪ್ರತಿರೋಧದ ವ್ಯಕ್ತಪಡಿಸುವುದೇ ಎಂದರೆ ಅದೊಂದು ಬಂಡಾಯವೇ ಆಗಿದೆ ಸಂಪ್ರದಾಯ ಆಚಾರ ವಿಚಾರಗಳ ಹೆಸರಿನಲ್ಲಿ ಹತ್ತಿಕ್ಕಲ್ ಪಟ್ಟ ನಮ್ಮ ಭಾವನೆ ಮಾನಸಿಕ ಸ್ಥಿತಿಗಳು ಒಮ್ಮೆಲೇ ಸ್ಫೋಟಿಸಿ ತೋರಿಸುವ ಪ್ರತಿಭಟನೆಗೆ ಪ್ರತಿರೋಧದ ನಮ್ಮ ಮನೋವೃತ್ತಿಯನ್ನು ಬರಿಯ ಭಾವಾವೇಷದಿಂದ ಎಷ್ಟೆಷ್ಟು ಅದು ಬಿಡಲು ಪ್ರಯತ್ನ ಪಡುತ್ತೇವೆ ಅದು ಅಷ್ಟಷ್ಟು ಪ್ರತಿರೋಧವನ್ನುಂಟು ಮಾಡುತ್ತದೆ ಎನ್ನುತ್ತಾರೆ ಶಿವರಾಮ ಕಾರಂತರು.

ಬಂಡಾಯದ ಒಂದು ರೂಪವೇ ಈ ಪ್ರತಿರೋಧ ಇದು ಒಂದು ಬಗೆಯ ಮಾನಸಿಕ ಸ್ಥಿತಿ ಪರಂಪರೆಯ ನಂಬಿಕೆಗಳನ್ನು ಬಂಡೆದ್ದು ಪ್ರತಿಭಟಿಸುವ ರೀತಿ ಮೌಲ್ಯಗಳು ಸಂಘರ್ಷದಲ್ಲಿ ಹುಟ್ಟಿದ ವಿಚಾರ ಪರಂಪರೆಯ ಯಜಮಾನ್ಯ ಪ್ರವೃತ್ತಿ ಮಹಿಳೆಯ ಭಾವನೆ ಹತ್ತಿಕ್ಕುವಲ್ಲಿ ಬಳಸುವ ತಂತ್ರಗಾರಿಕೆಯನ್ನು ವಿರೋಧಿಸುವ ಬಗೆಯೇ ಈ ಪ್ರತಿರೋಧ ಸರಸಮ್ಮನ ಸಮಾಧಿಯ ಹಿರಣ್ಯ ಭಗೀರತಿಯರ ಕುಟುಂಬವು ಇದಕ್ಕೆ ಹೊರತಾಗಿಲ್ಲ ಹಿರಿಯ ತಲೆಮಾರಿನಲ್ಲಿ ಗಂಡ ಹೆಂಡತಿ ಸಲುಗೆಯಿಂದ ವರ್ತಿಸುವುದು ಅವರಲ್ಲಿ ಮುಜುಗರ ಉಂಟುಮಾಡುತ್ತದೆ ಅದರಿಂದಾಗಿಯೇ ಹಿರಣ್ಯನಾ ತಂದೆ ವೆಂಕಟರಮಣಯ್ಯನಿಗೆ ಮದುವೆಯ ಹೊಸದರಲ್ಲಿ ತನ್ನ ಮಗ ಸೊಸೆ ಹರಟುವುದು ಸರಿ ಎನಿಸುವುದಿಲ್ಲ ತನ್ನ ಅಸಮಾಧಾನವನ್ನು ಮಗನಿಗೆ ಏಕಾಂತದಲ್ಲಿ ತಿಳಿ ಹೇಳಬಹುದು ದುಡುಕುತನದಿಂದ ತಮ್ಮ ಹೆಂಡತಿಯ ಎದುರು ಮಗ ಸೊಸೆಯರನ್ನು ಉದ್ದೇಶಿಸಿ ನಿನ್ನ ಮಗನಿಗೆ

 ISBN Number: 978-93-342-6162-2

ಸ್ವಲ್ಪ ಬುದ್ಧಿಯನ್ನು ಹೇಳು ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಿಲ್ಲ ಯಾವುದು ಎಲ್ಲಿರಬೇಕು ಅದು ಅಲ್ಲಲ್ಲಿ ಇದ್ದರೇನೇ ಚಂದ ಎಂದು ಕಾಲಿನದ್ದು ಕಾಲಿಗೆ ತಲೆಗಲ್ಲ ಎಂದು ಹೇಳುತ್ತಾನೆ ತನ್ನನ್ನು ಕಾಲಿಗೆ ಹೇಳಿದರೆ ಎಂಬುದು ಅವಳಿಗೆ ಅವಮಾನವನ್ನು ಉಂಟುಮಾಡುತ್ತದೆ ತಾಳ್ಮೆಯಿಂದ ಅದನ್ನು ಸಹಿಸಿಕೊಳ್ಳದೆ ಉದ್ವೇಗಕ್ಕೆ ಒಳಗಾಗಿ ತವರು ಮನೆಗೆ ಹೋಗುತ್ತಾಳೆ ಇದರಿಂದ ಅವರ ಸಂಸಾರದಲ್ಲಿ ವಿರಸ ಉಂಟಾಗುತ್ತದೆ ಈ ಘಟನೆಯಿಂದ ಮನನೊಂದ ಹಿರಣ್ಯನು ಹೆಂಡತಿಯ ಪ್ರೀತಿಯನ್ನು ತಿರುಗಿ ಪಡೆಯಲು ಅವಳ ತವರು ಮನೆಗೆ ಹೋಗುತ್ತಾನೆ ಅವಳ ಮನವನ್ನು ಹೋಲಿಸಿ ತವರು ಮನೆಯಿಂದ ಕರೆತರುವಲ್ಲಿ ಯಶಸ್ವಿ ಆಗುತ್ತಾನೆ ಚಿತ್ರಗೊಂಡಿರುವ ಕುಟುಂಬಗಳು ಹೇಗಾದರೂ ಒಂದುಗೂಡಿ ಹೊಸ ಮೌಲ್ಯಗಳ ಅಡಿಪಾಯದ ಮೇಲೆ ಕೌಟುಂಬಿಕ ವ್ಯವಸ್ಥೆ ರೂಪವನ್ನು ಪಡೆದುಕೊಳ್ಳಬೇಕು ಎಂಬುದು ಕಾದಂಬರಿಯ ಆಶಯವಾಗಿದ್ದು ಅದು ಈಡೇರುವುದು ಸ್ಪಷ್ಟವಾಗುತ್ತದೆ.

ಸರಸಮ್ಮನ ಸಮಾಧಿ ಕಾದಂಬರಿಯೂ ಮದುವೆಯ ಬಾಂಧವ್ಯ ಗಟ್ಟಿಯಾಗಿ ಉಳಿಯಬೇಕಾದರೆ ಗಂಡ ಹೆಂಡತಿಯರಲ್ಲಿ ಹೊಂದಾಣಿಕೆ ಇರಬೇಕು ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಂಡು ಸ್ಪಂದಿಸಬೇಕು ಎಂಬ ಸಾರವನ್ನು ಹೊಂದಿದೆ ಮನೆಯ ಹಿರಿಯರಾದವರು ಹಿರಿಯರ ತಪ್ಪುಗಳನ್ನು ಸಂಯಮದಿಂದ ತಿದ್ದಿ ಬಗೆಹರಿಸಬೇಕು ಕುಟುಂಬದ ಸದಸ್ಯರಲ್ಲಿ ಸಾಮರಸ್ಯವನ್ನು ಉಂಟು ಮಾಡಬೇಕು, ದುಡುಕುತನದಿಂದ ಸಾಂಪ್ರದಾಯಿಕತೆಯ ಮೌಲ್ಯದಿಂದ ಕುಟುಂಬದ ಶಾಂತಿಯನ್ನು ಕೆಡಿಸಬಾರದು ಎಂಬುದು ಕಾದಂಬರಿಯ ಪಾತ್ರಗಳಿಂದ ದೃಢವಾಗುತ್ತದೆ ಆದರೆ ಹಳೆಯ ತಲೆಯಲ್ಲಿ ಹೊಸ ಚಿಂತನೆಗಳು ಬರುವುದಿಲ್ಲ ಸಂಪ್ರದಾಯ ಸಮಾಜ ಹೊಸತನದ ಆಧುನಿಕತೆಯ ಪಲ್ಲಟ ದೊಂದಿಗೆ ಹೊಂದಿಕೊಳ್ಳುವುದಕ್ಕೂ ಹೆಣಗಾಡುವುದು ಕಾದಂಬರಿಯ ಮೂಲ ಆಶಯವಾಗಿದೆ ಪುರುಷ ಪ್ರಧಾನ ಸಮಾಜದ ಹಳಿಕಿತ ನಿಯಮದಂತೆ ಪುರುಷನು ಹೊರಗಡೆ ದುಡಿಯಲು ಹೋಗಬೇಕು ಸ್ತ್ರೀಯರು ಮನೆಯಲ್ಲಿಯೇ ಇದ್ದು ಅಡುಗೆ ಕೆಲಸ ಮಾಡುತ್ತ ಮಕ್ಕಳನ್ನು ಪೂಜಿಸಿಕೊಂಡು ಹೋಗಬೇಕು ಎಂಬುದನ್ನು ಸಮಾಜವು ಒಪ್ಪಿಕೊಂಡು ಬಂದಿದೆ ಸೋಮಾರಿಯಾಗಿದ್ದರೆ ಗಂಡ ಸಾವಿಗೀಡಾಗಿದ್ದರೆ ಸಹ ಸ್ತ್ರೀಯರು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುವವರು ಎಂಬುದನ್ನು ಕಾರಂತರ ಹಲವಾರು ಕಾದಂಬರಿಗಳಲ್ಲಿ ಗುರುತಿಸಬಹುದು ಇದು ಸನ್ಯಾಸಿಯ ಬದುಕು ಕಾದಂಬರಿಯಲ್ಲಿ ಸ್ಪಷ್ಟವಾಗುತ್ತದೆ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವರಿಗೆ ಜಗತ್ತು ಎಂದೂ ಬೇಸರವಾಗಿ ತೋರುವುದಿಲ್ಲ ಪರಂಪರಾನುಗತವಾಗಿ ಈ ಧೋರಣೆ ಬಂದಿದೆ ಇದನ್ನು ಮೀರುವುದು ಕಾದಂಬರಿಗಳಲ್ಲಿ ಕಾಣಿಸುತ್ತದೆ ಶಂಕರರಾಯನ ಸಂಸಾರ ಒಂದು ಮಾಯೆ ಎಂದು ನೆಪ ಹೇಳಿ ಮಕ್ಕಳನ್ನು

 ISBN Number: 978-93-342-6162-2

ಹೆಂಡತಿಯನ್ನು ತೊರೆದು ಬೇಜವಾಬ್ದಾರಿಯಿಂದ ಸಂಸಾರದಿಂದ ಪಲಾಯನ ಮಾಡುತ್ತಾನೆ ಸಂಸಾರದಿಂದ ವಿಮುಖನಾದ ಶಂಕರರಾಯನು ಕಪಟ ಸನ್ಯಾಸಿಯಾಗಿ ಊರು ಅಲೆಯುತ್ತಾನೆ ಆದರೆ ಅವನ ಹೆಂಡತಿ ಸುಮಿತ್ರೆಗೆ ಮಾತ್ರ ಸಂಸಾರವನ್ನು ತೊರೆಯಲಾಗುವುದಿಲ್ಲ ಗಂಡಸಿಗೆ ಮದುವೆಯಾಗುವುದು ಸುಲಭ ಸಂಸಾರವನ್ನು ಬಿಡುವುದು ಸುಲಭ ಹೆಂಗಸಿಗೆ ಹಾಗಲ್ಲ ನಂಬಿದ ದೈವವೇ ಮೋಸ ಕೊಟ್ಟಿತೆಂದು ತನ್ನನ್ನು ನಂಬಿರುವ ಮಕ್ಕಳನ್ನು ಬಲಿ ಕೊಡಲು ಬರಲಾರದು ಎಂದು ಹೇಳುತ್ತಾಳೆ ಸ್ತ್ರೀಯರ ಇಂತಹ ಮಾತೃ ವಾತ್ಸಲ್ಯವನ್ನು ಪುರುಷ ಪ್ರಧಾನ ಸಮಾಜವು ಹೆಣ್ಣಿನ ದೌರ್ಬಲ್ಯವನ್ನಾಗಿ ಗುರುತಿಸಿರುವುದು ಸ್ಪಷ್ಟವಾಗುತ್ತದೆ ಇದರಿಂದಾಗಿಯೇ ಮಗುವಿಗೆ ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು ಎಂದು ಹೇಳಲಾಗುತ್ತದೆ ಸ್ತ್ರೀಯರನ್ನು ಆದರ್ಶದ ಪರಿಧಿಯಲ್ಲಿ ಬಂದಿಸಲ್ಪಟ್ಟಿರುವುದು ಪರಂಪರಾನುಗತವಾಗಿ ಬಂದ ಧೋರಣೆಯಾಗಿ ಕಾಣಸಿಗುತ್ತದೆ

ಧರ್ಮರಾಯನ ಸಂಸಾರ ಕಾರಂತರ ಬಂಡಾಯ ಮನೋಧರ್ಮವನ್ನು ಗರ್ಭೀಕರಿಸಿಕೊಂಡ ಒಂದು ಮಹತ್ವಪೂರ್ಣ ಕೃತಿ ಹೆಣ್ಣಿನ ಮನೋವೃತ್ತಿ ಎಷ್ಟೆಷ್ಟು ಧಮನಕ್ಕೆ ಆಕ್ರಮಣಕ್ಕೆ ಹತ್ತಿಕ್ಕು ದಕ್ಕೆ ಒಳಗಾಗುತ್ತದೆ ಅಷ್ಟಷ್ಟು ಪ್ರತಿಭಟನೆಯ ಧ್ವನಿಯನ್ನು ಯಾವುದಾದರೂ ಒಂದು ರೂಪದಲ್ಲಿ ಪ್ರಕಟಗೊಳ್ಳುತ್ತದೆ ಎಂಬುದಕ್ಕೆ ಈ ಕಾದಂಬರಿ ಉತ್ತಮ ನಿರ್ದೇಶನ ಹೆಣ್ಣು ಮಾನಸಿಕವಾಗಿ ದೈಹಿಕವಾಗಿ ಹೋರಾಡುವ ಸ್ಥಿತಿಯನ್ನು ಚಿತ್ರಿಸುವ ಕಾರಂತರು ಅವಳಿಗಾಗುವ ಮಾನಸಿಕ ದೈಹಿಕ ಹಿಂಸೆಯ ಕರಾಳ ಮುಖವನ್ನು ಇಲ್ಲಿ ತೆರೆದಿಟ್ಟಿದ್ದಾರೆ ಸುಪ್ತ ಪ್ರಜ್ಞೆಯಲ್ಲಿ ರೂಪುಗೊಳ್ಳುವ ಪ್ರತಿಭಟನಾ ಧೋರಣೆ ಸಹಜವೇ ಎಂಬಂತೆ ಕಾಣಿಸುತ್ತದೆ. ಸಾಮಾಜಿಕ ಕಟ್ಟುಪಾಡುಗಳು ಸ್ತ್ರೀ ಬದುಕನ್ನು ಹೇಗೆ ನಿರ್ಬಂಧಿಸಿ ಅವಳ ಧನಿಯನ್ನು ಅಡಗಿಸಿವೆ ಕ್ರಮೇಣ ಒಳಗೊಳಗೆ ಕುದಿಯುತ್ತಿದ್ದ ಕಾವು ತನ್ನಲ್ಲೇ ಗಟ್ಟಿಯಾಗಿ ಒಮ್ಮೆಲೆ ಹಾಸ್ಫೋಟಿಸುತ್ತದೆ ಎನ್ನುವದರ ನಿರಂತರ ಕ್ರಿಯಾ ಸಂವಿಧಾನದಲ್ಲಿ ಕಾರಂತರು ಕಟ್ಟಿದ್ದಾರೆ ಪ್ರತಿಭಟನೆಯು ಒಮ್ಮೆಲೇ ಕಾಣಿಸುವುದಿಲ್ಲ ಒಂದು ಬಿಂದುವಿನಲ್ಲಿ ಸುಮ್ಮನೆ ಹಸ್ತವೆಯಲ್ಲಿ ಸೂಕ್ತ ಪ್ರಜ್ಞೆಯಲ್ಲಿ ಕಾಣಿಸಿಕೊಳ್ಳುತ್ತದೆ ಇನ್ನೊಂದು ಬಿಂದುವಿನಲ್ಲಿ ತನ್ನ ಅಂತಶಕ್ತಿಯನ್ನು ತುಂಬಿಸಿಕೊಳ್ಳುತ್ತದೆ ಕೊನೆಯ ಬಿಂದುವಿನಲ್ಲಿ ಭುಗಿಲೆದ್ದು ಆಸ್ಫೋಟಿಸುತ್ತದೆ ಮಹಾಲಕ್ಷ್ಮಿ ಚಂದು ಸರಸ್ವತಿ ಈ ಮೂರು ಕೌಟುಂಬಿಕ ನೆಲೆಯಲ್ಲಿ ಅಧಿಕಾರ ಮತ್ತು ಲೈಂಗಿಕ ರಾಜಕಾರಣದ ವಿರುದ್ಧ ಸಾಮೂಹಿಕ ಬಂಡಾಯಕ್ಕೆ ಸಜ್ಜಾದ ಪಾತ್ರಗಳು ಪಾತ್ರದಿಂದ ಪಾತ್ರಕ್ಕೆ ಬದಲಾಗುವ ಉದ್ದೇಶದಂತೆ ಇಲ್ಲಿಯ ಪ್ರತಿರೋಧದ ಬೆಳವಣಿಗೆಯನ್ನು ಗುರುತಿಸಬಹುದು ಪ್ರತಿರೋಧದ ಕೇಂದ್ರವೇ ಮಹಾಲಕ್ಷ್ಮಿ ಆಗಿರುತ್ತಾಳೆ.

 ISBN Number: 978-93-342-6162-2

ಬಾರ್ಕೂರಿನ ನಾರಾಯಣ ಹೆಬ್ಬಾರರ ಧರ್ಮಪತ್ನಿ ಮಹಾಲಕ್ಷ್ಮಿ ಅವಳು ಒಂದರ್ಥದಲ್ಲಿ ಹೆಬ್ಬಾರರ ಮನೆಯ ಯಜಮಾನಿ ಅವರ ಸಂಪತ್ತಿನ ಹೊರತಿ ಇನ್ನೊಂದರ್ಥದಲ್ಲಿ ಸಂಪತ್ತು ಚಿನ್ನಾಭರಣಗಳಂತೆ ಮಹಾಲಕ್ಷ್ಮಿಯು ಅವರ ವಸ್ತು ಆಸ್ತಿ ತೀರ ಬಡತನದಲ್ಲಿಯೇ ಹುಟ್ಟಿ ಬಂದ ಅವಳಿಗೆ ಸಿರಿವಂತಿಕೆ ಚಿನ್ನದ ಪಂಜರದಂತೆ ಬಡತನದ ಬೇಗೆ ಅವಳಿಗೆ ಇಷ್ಟ ನಿಸರ್ಗದ ಸಹಜ ಬದುಕಿನೊಂದಿಗೆ ಬೆಳೆದ ಅವಳಿಗೆ ಅಪ್ಪ– ಅಮ್ಮನ ಜೊತೆಯಲ್ಲಿ ಮೆಣಸಿನ ಗಿಡಗಳ ಸಾಲನ್ನು ನೆಡಬೇಕು ಗೊಬ್ಬರ ಹಾಕಬೇಕು ಅಲ್ಲಿಯದ್ದೇ ಗೊಜ್ಜು ಪಲ್ಯ ಬೇಡ ಇಲ್ಲದ ಸಾರು ಸುಣ್ಣದ ನೀರಿನಂತಹ ಮಜ್ಜಿಗೆ ಇವನ್ನು ತನ್ನ ಹಿರಿಯರಿಗೆ ಬಡಿಸಿ ಅವರ ಜೊತೆಗೆ ತಾನು ಕುಳಿತು ತಿನ್ನಬೇಕು ಮುಸುರೆ ಉಜ್ಜಬೇಕು. ನೆಲ ಗುಡಿಸಬೇಕು ಎಂಬುದು ಅವಳ ಅಲ್ಪ ಆಸೆಗಳ ಆದರೂ ಹೆಬ್ಬಾರ ಮನೆಯಂತಹ ಸಿರಿವಂತರ ಮನೆಯಲ್ಲಿ ಇಂತಹ ಸ್ವಚ್ಛಂದ ಬದುಕಿಗೆ ಆಸ್ಪದವೇ ಸಿಗುವುದಿಲ್ಲ.

ಒಂದೆರಡು ದಿನಕ್ಕೆ ನಾನು ಮನೆಗೆ ಹೋಗಿ ಬರಲೇ ಎಂದು ಬೇಡಿದರು ಸಮ್ಮತಿಯ ಮುದ್ರೆ ಅವಳಿಗೆ ಸಿಗದು ಮಹಾಲಕ್ಷ್ಮಿಯ ಬದುಕು ಬಾಯಿ ಮಾತಿನ ಬದುಕು ಆಗಿರಲಿಲ್ಲ ಮೂಕ ಮೌನದ ಬದುಕು ಆಕೆಯ ಜೀವನ ಒಂದು ರೀತಿಯಿಂದ ತಪಸ್ವಿನಿಗೆ ಬದುಕು ಎನ್ನಬಹುದು ಮನೆಯ ಯಜಮಾನಿ ಅನಿಸಿಕೊಂಡ ಅವಳಿಗೆ ಅನಾವಶ್ಯಕವಾಗಿ ಮನೆಯ ವಿಶಾಲವಾದ ಹೆಬ್ಬಾಗಿಲನ್ನು ದಾಟಿ ಮುಂದಿನ ಅಂಗಳಕ್ಕೂ ಕೂಡ ಬರುವಹಾಗೆ ಇಲ್ಲ ತಮ್ಮ ಯಜಮಾನರು ನಿಂತಿದ್ದ ವೇಳೆಯಲ್ಲಿ ಅವರು ಕುಳಿತಿರುವ ಗಳಿಗೆ ಎಂಬುದೇ ಇಲ್ಲ ಊಟದ ಹೊತ್ತಿಗೆ ಬಂದಾಗ ಮಾತ್ರ ಎಡೆ ಬಿಟ್ಟು ಹೇಳಲಾರದಕ್ಕೆ ಕುಳಿತೇ ಇದ್ದಾರೆಯೇ ಹೊರತು ಬೇರೆ ಸಮಯದಲ್ಲಿ ಹಾಗೆಂದು ಮಾಡಿದವರಲ್ಲ ಹೆಬ್ಬಾರರು ತಮ್ಮ ಭೂಮಿ ಕಾಣಿಕೆಗಳ ವಿಚಾರವಾಗಲಿ ತನ್ನ ವ್ಯವಹಾರಿಕ ಜೀವನದ ವಿವರವಾಗಲಿ ಮಡದಿಯೊಡನೆ ಹೇಳಿಕೊಂಡವರಲ್ಲ ಹೇಳಬಾರದು ಎನ್ನುವುದಕ್ಕೆ ಯಾವ ಉದ್ದೇಶವೂ ಇಲ್ಲ ಹೊಟ್ಟಿನಲ್ಲಿ ನಾರಾಯಣ ಹೆಬ್ಬಾರರಿಗೆ ಹೆಂಡತಿ ಎಂದರೆ ಕ್ಷುಲ್ಲಕ ವಸ್ತು ಕಾಲಿನ ಕಸ ಮನೆಯಲ್ಲಿ ನಡೆಯುವ ಎಲ್ಲ ವಿಚಾರಗಳನ್ನು ಪರರಬಾ ಇಂದಲೇ ತಿಳಿದುಕೊಳ್ಳುವ ದೌರ್ಭಾಗ್ಯ ಅವಳ ಪಾಲಿಗೆ ಗಂಡನ ಅಧಿಕಾರಧರ್ಭ ವೇಶ್ಯೆಯ ಜೊತೆಗಿನ ವಿಳಾಸ ಬದುಕು ಎಲ್ಲ ತಿಳಿದಿದ್ದರೂ ಮೂಕವಾಗಿ ಪ್ರತಿಭಟಿಸದೆ ಅನುಭವಿಸಬೇಕು ಹೆಬ್ಬಾರರ ನಿರಂಕುಶಪ್ರಭುತ್ವದ ಎದುರಿಗೆ ಎಂದೂ ಗಟ್ಟಿಯಾಗಿ ನಿಲ್ಲದ ಮಹಾಲಕ್ಷ್ಮಿ ಪತಿಯಲ್ಲಿ ಜಗಳ ಕೊಡುವ ಧೈರ್ಯ ಮಾಡಿದ್ದು ತನ್ನ ಪ್ರೀತಿಯ ಮಗಳಾದ ಸರಸ್ವತಿಯ ಮದುವೆಯ ಸಂದರ್ಭದಲ್ಲಿ ತನ್ನ ಪತಿಯ ಇಚ್ಛೆಯನ್ನು ತಿರುಗಿಸುವ ಸರಳ ಪ್ರಯತ್ನ ಕೈಗೂಡದಿದ್ದಾಗ ತಳೆದದ್ದು ಸೂಕ್ತ ಪ್ರತಿಭಟನೆಯ ಅಥವಾ ಬಂಡಾಯ ಆದರೆ ಅದು ಪ್ರತ್ಯಕ್ಷ ಅಥವಾ ವ್ಯಕ್ತವಲ್ಲ ಅಂತರ್ಗತವಾದದ್ದು.

 ISBN Number: 978-93-342-6162-2

ಹೆಬ್ಬಾರರು ಸರಸ್ವತಿಗೆ ಮದುವೆ ಮಾಡಲು ಹೊರಟಿದ್ದು ಹಾರೇಬಯಲು ಮಹಾಬಲಯ್ಯನ ಮನೆಗೆ ಅದು ಮತ್ತೊಂದು ನರಕ ಮಹಾಬಲಿಯನ ಕ್ರೌರ್ಯ ಊರಿಗೆ ಪರಿಚಿತವಾದದ್ದು ಜೀವಂತ ನಾಯಿಯನ್ನು ವಿಕೃತವಾಗಿ ಬೆಂಕಿ ಹಚ್ಚಿ ಕೊಂದವನು ಅವನು ಮಹಾಬಲಯ್ಯ ವಿಲವಿಲ ಒದ್ದಾಡಿ ಸಾಯುವುದನ್ನು ನೋಡಿ ಸಂತೋಷಪಡುವ ವಿಕೃತ ಆನಂದ ಆತನದ್ದು ಜೀವ ಹಿಂಸೆ ಅವನಿಗೆ ನೀರು ಕುಡಿದಷ್ಟು ಸುಲಭ ಅಷ್ಟೇ ಅಲ್ಲ ಅವನೊಬ್ಬ ವಿಕೃತಕಾಮಿ ಅಂತವನೊಂದಿಗೆ ಸರಸ್ವತಿಯ ಮದುವೆ ಎಂದರೆ ಅದು ಪ್ರತ್ಯಕ್ಷವಾಗಿ ತನ್ನ ಮಗಳನ್ನು ತಾನೇ ಕಟುಕನ ಕೈಗೆ ಇಟ್ಟಂತೆ ಚಂದುವಿನಿಂದ ಈ ವಿಚಾರಗಳನ್ನೆಲ್ಲ ಮಹಾಲಕ್ಷ್ಮಿ ಹೇಗಾದರೂ ಈ ಮದುವೆಯನ್ನು ತಪ್ಪಿಸಬೇಕೆಂಬ ಪ್ರತಿರೋಧದ ಶಕ್ತಿಯನ್ನು ಮನಸ್ಸಿನಲ್ಲಿ ತುಂಬಿಸಿಕೊಳ್ಳುತ್ತಾಳೆ ಗಂಡಸಿನ ಅಧಿಕಾರ ಪ್ರವೃತ್ತಿಯನ್ನು ಪ್ರತಿಭಟಿಸುವಲ್ಲಿ ಚಂದು ಅವಳ ಜೊತೆಗೂಡುತ್ತಾಳೆ ಆದರೆ ಮಹಾಲಕ್ಷ್ಮಿ ಸೋಲುತ್ತಾಳೆ ಚಂದು ಸೋಲುತ್ತಾಳೆ ನೀ ಮದುವೆಯಲ್ಲಿ ನರ್ತನ ಮಾಡಲು ಚೆಂದುವಿನ ತಂಗಿ ಲಕ್ಷ್ಮಿ ನಾನು ನನ್ನ ಪ್ರಾಣ ಹೋದರು ಆ ಮದುವೆ ಮಂಟಪಕ್ಕೆ ಕಾಲಿರಿಸುವವಳಲ್ಲ ಎಂದು ಒಪ್ಪದೇ ಹೋದದ್ದು ಅವಳ ಪ್ರತ್ಯಕ್ಷ ಪ್ರತಿಭಟನೆ ಆದರೆ ಇಂತಹ ಪ್ರತಿಭಟನೆ ಹೆಬ್ಬಾರರ ಹಕ್ಕಿನ ವೇಶ್ಯೆಯಾದ ಚಂದುವಿಗೆ ಸಹ ಸಾಧ್ಯವಾಗಲಿಲ್ಲ ಈ ಹಂತದಲ್ಲಿ ಅವಳು ತೋರಿಸಿದ್ದು ಅಪ್ರತ್ಯಕ್ಷ ಪ್ರತಿಭಟನೆ ಚಂದು ಲಗ್ನದ ಸಭೆಯ ಮುಂದೆ ತಂಗಿ ಲಕ್ಷ್ಮಿಯ ಜೊತೆ ಇಲ್ಲದ ಇನ್ನೊಬ್ಬಳು ಯಾವೋಳು ಗುರುತಿನ ನರ್ತಕಿಯನ್ನು ಕೂಡಿಕೊಂಡು ಕುಣಿದು ಸಭೆಯನ್ನು ರಂಜಿಸಿದೆಂಬುದು ವಾಸ್ತವಿಕವಾಗಿ ನರ್ತನ ಮಾಡಿದ್ದಲ್ಲ ಭೂಮಿ ತಾಯಿಯನ್ನು ಸಿಟ್ಟಿನಿಂದ ತುಳಿದದ್ದು ಎಂದು ಕಾರಂತರು ವಿವರಿಸುವಲ್ಲಿ ಚಂದುವಿನ ಮಾನಸಿಕ ಪ್ರತಿರೋಧದ ವಿಧಾನ ಗಮನ ಸೆಳೆಯುತ್ತದೆ ಚಂದು ಮಹಾಲಕ್ಷ್ಮಿಯನ್ನು ಮಾನಸಿಕವಾಗಿ ಪ್ರತಿರೋಧಕ್ಕೆ ತಯಾರಿ ಮಾಡುವ ವಿಧಾನವು ಅಷ್ಟೇ ತೀವ್ರವಾದದು ಜಾತಕ ಎಷ್ಟು ಕೂಡಲೇ ಯಾರು ಏನೇ ಹೇಳಲಿ ನೀವು ಅನ್ನ ಬಿಟ್ಟಾದರೂ ಅದನ್ನು ನಡೆಯಕೂಡಬಾರದು ಎಂದು ಕಳವಳ ಹೆಚ್ಚಿಸಿ ಅಳು ಬರಿಸಿ ಭಯ ಹುಟ್ಟಿಸುವಲ್ಲಿ ಚಂದುವಿನ ಬಂಡಾಯ ಪ್ರಜ್ಞೆ ಮಹಾಲಕ್ಷ್ಮಿಯ ಮೇಲೆ ಪ್ರಭಾವ ಬೀರುವಂತಹ ಆಗುತ್ತದೆ ಆದರೂ ಮಹಾಲಕ್ಷ್ಮಿಗೆ ಗಂಡನೊಡನೆ ಪ್ರಸ್ತಾಪಿಸಲಾಗದ ಕುಲಗೂರು ಐತಾಳರೊಡನೆ ತನ್ನ ಅಸಮ್ಮತಿಯನ್ನು ತಿಳಿಸುತ್ತಾಳೆ ಅದನ್ನು ಐತಾಳರ ಮೂಲಕ ತಿಳಿದ ಹೆಬ್ಬಾರರು ಹೆಂಡತಿಯನ್ನು ಬಿರಬಿರವೆ ನೋಡಿ ಯಾವ್ಯಾವುದೋ ಎಲ್ಲಿರಬೇಕು ಅಲ್ಲಿದ್ದರೆ ಚಂದ ಎಂದು ದರ್ಪದಿಂದಲೇ ನುಡಿಯುತ್ತಾರೆ.

ಅಸಹಾಯಕಳಾದ ಮಹಾಲಕ್ಷ್ಮಿ ತನ್ನ ಮೊದಲನೇ ಅಳಿಯನನ್ನು ಸುಡುವ ಕಣ್ಣಿನಿಂದ ನೋಡಿದ್ದು ತಾನು ಆ ಮನೆಯಲ್ಲಿ ಕಸವೆಂದು ನಂದದ್ದು ಸಾಕ್ಷಾತ್ ಪರಮೇಶ್ವರನೇ ಬಂದರು ತನ್ನ ಮಗಳ ಬಲಿಯನ್ನು ತಪ್ಪಿಸಲು ಸಾಧ್ಯವಿಲ್ಲವೆಂದು ಕಿರುಚಿದ್ದು ಎಲ್ಲವೂ ಅವಳ ಒಳಗಿನ ಪ್ರತಿಭಟನೆಯೇ ಯಜಮಾನ ಬಗೆಗಿನ ಅವಳ

 ISBN Number: 978-93-342-6162-2

ಪ್ರತಿರೋಧದ ಅಸಹಾಯಕ ರೂಪವೇ ಅವಳ ಪೇತಾವಸ್ತೆ ಎನ್ನಬಹುದು ದೆವ್ವ ಮೈಮೇಲೆ ಬಂದಾಗ ಅಥವಾ ಜಕಣಿ ಹಿಡಿದಾಗ ಮಹಾಲಕ್ಷ್ಮಿ ಭಯಂಕರ ಮಹಾಕಾಳಿಯ ರೂಪವನ್ನು ತಡೆದು ಬಿಡುತ್ತಾರೆ ಗೋಡೆಗೆ ಹೊರಗಿ ಹಲ್ಲನ್ನು ಕಡೆಯುತ್ತ ಓಂಕರಿಸಿ ಗರ್ಜಿಸುತ್ತಾರೆ ಸರಸ್ವತಿಯ ಮದುವೆಯ ದಿನ ಕಾಣಿಸಿಕೊಂಡ ಮಹಾಲಕ್ಷ್ಮಿ ಅಮ್ಮನ ಈ ಭಯಂಕರ ರೂಪ ಅವರೊಳಗಿನ ಆತೃಪ್ತಿಯ ಪ್ರತಿಬಿಂಬ ಬಹಿರಂಗವಾಗಿ ಪ್ರತಿಭಟನೆಯ ಸೂಚಿಸಲಾರದ ಅಸಹಾಯಕ ಮನಸ್ಸು ಅಪ್ರಗ್ನಾಪೂರ್ವಕವಾಗಿ ಈ ರೀತಿಯಲ್ಲಿ ಜಾಗೃತವಾಗಿ ಪ್ರತಿಭಟಿಸುತ್ತದೆ ಇಲ್ಲಿ ಮಹಾಲಕ್ಷ್ಮಿಯ ಜಾಗೃತ ಅವಸ್ಥೆಯ ಪ್ರತಿರೋಧ ಪ್ರಜ್ಞಾಪೂರ್ವಕವಾಗಿ ಪ್ರಕಟವಾಗದೆ ಇದ್ದಾಗ ಅದನ್ನು ಮೊದಲ ಸ್ಥಿತಿಗಿಂತಲೂ ದಮನವೆಂತಲೂ ಧಮನವನ್ನು ಆರಂಭಿಸಿ ನಿರ್ವಹಿಸುವ ಶಕ್ತಿ ವಿಶ್ಲೇಷಣ ಕಾರ್ಯದ ಕಾಲದಲ್ಲಿ ಪ್ರತಿರೋಧ ವಿರೋಧ ಎಂದು ಗ್ರಹಿಸಲ್ಪಡುತ್ತದೆ.

ನಿರ್ದಿಷ್ಟ ಶಕ್ತಿ ಒಂದು ಅಹಂಗೆ ವಿರುದ್ಧವಾದಾಗ ಅದು ಜಾಗೃತವಾಗಿ ಉಂಟು ಮಾಡುವ ಪ್ರಭಾವವನ್ನು ಮಾನಸಿಕ ಸ್ಥಿತಿಯನ್ನು ಅವಲಂಬಿಸಿದೆ ಮಹಾಲಕ್ಷ್ಮಿಗೆ ಒದಗಿದ ಸ್ಥಿತಿ ಇಂತಹದ್ದು ಪುರೋಹಿತಶಾಹಿ ಮತ್ತು ಶಾಹಿ ಇವೆರಡು ಶಕ್ತಿಗಳು ಒಂದಕ್ಕೊಂದು ಸೇರಿ ಮಾಡಿದ ಅತಿಕ್ರಮಣಕ್ಕೆ ಅವಳ ಮಾನಸಿಕ ಸ್ಥಿತಿ ವಡ್ಡಿದ ವಿರೋಧವೇ ಈ ಜಕಣಿ ತಾನೊಂದು ಅತೀವ ಶಕ್ತಿ ಎಂಬ ಬ್ರಮೆಗೂ ಒಳಗಾಗಿ ನನ್ನನ್ನು ಅಳುಗಾಡಿಸುವ ಶಕ್ತಿ ನಿನ್ನಲ್ಲಿ ಇಲ್ಲ ಎನ್ನುತ್ತಾ ಗಂಡನನ್ನು ಮತ್ತು ಪುರೋಹಿತ ಐತಾಳರನ್ನು ಏಕವಚನದಲ್ಲಿ ಸಂಭೋಧಿಸುತ್ತಾಳೆ ಪುರೋಹಿತಶಾಹಿ ಪರಂಪರೆಯನ್ನು ಪ್ರತಿರೋಧಿಸುವ ಶಕ್ತಿಯನ್ನು ಮಾತಿನಲ್ಲಿ ಪ್ರಕಟಿಸುತ್ತಾಳೆ ಸರಸಮ್ಮನ ಸಮಾಧಿಯ ಪರಂಪರೆಯ ಪ್ರತಿರೋಧದ ನೆಲೆಗಳನ್ನು ನೋಡುವಾಗ ಇದರ ಸ್ವರೂಪವೇ ಸುನಾಲಿನಿ ಭಾಗೀರಥಿಯಲ್ಲಿ ಕಾಣಿಸುತ್ತದೆ.

ಆದರೂ ಈ ಬಗೆಯಾ ತಂತ್ರದಲ್ಲೂ ಕೂಡ ಸಾಕಷ್ಟು ವೈವಿಧ್ಯತೆ ಇದೆ ವಿಷಯದ ಅನ್ವೇಷಣೆಗೆ ತಕ್ಕ ಹಾಗೆ ತಂತ್ರವು ಬದಲಾಗುತ್ತದೆ ಉದಾಹರಣೆಗೆ ಮರಳಿ ಮಣ್ಣಿಗೆ ಕಾದಂಬರಿಯಲ್ಲೂ ಮೂರು ತಲೆಮಾರುಗಳ ಕಥೆ ಇದೆ ಮೈಮನಗಳ ಸುಳಿಯಲ್ಲಿ ಕಾದಂಬರಿಯಲ್ಲಿ ಮೂರು ತಲೆಮಾರುಗಳ ಕಥೆಯನ್ನು ಕಾಣಬಹುದು ಒಂದರಲ್ಲಿ ಬದುಕಿನ ವಿಸ್ತಾರ ಮುಖ್ಯವಾಗಿದ್ದರೆ ಇನ್ನೊಂದರಲ್ಲಿ ಅನುಭವದ ವೈಯುಕ್ತಿಕ ತೀವ್ರತೆ ಮುಖ್ಯವಾಗಿದೆ ಅದಕ್ಕೆ ತಕ್ಕ ಹಾಗೆ ಅವುಗಳ ಬರವಣಿಗೆಯಲ್ಲೂ ನಿರೂಪಣೆಯ ಕೋನದಲ್ಲೂ ಸೂಕ್ಷ್ಮ ಬದಲಾವಣೆಗಳು ಆಗಿವೆ. ಸರ್ವ ಸಾಕ್ಷಿತ್ವ ಪ್ರಜ್ಞೆ ಮೂಲಕ ಕಥೆ ನಡೆಯುವುದು ಇದು ಒಂದು ಸಮಾಜ ನಡೆದು ಬಂದ ಬಗೆಯನ್ನು ಹಿಂದಿನ ಸಮಾಜಕ್ಕೆ ನೀಡುತ್ತದೆ ಎಂದಿದ್ದಾರೆ.

 ISBN Number: 978-93-342-6162-2

ಕುವೆಂಪು ಅವರ ಕಾನೂರು ಹೆಗ್ಗಡತಿಯಲ್ಲಿ ದಾರ್ಶನಿಕತೆ

ಅರುಣ.ಎಸ್
ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ. ರಾಜೇಶ್ ಬೆಜ್ಜಂಗಳ
ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ನವೋದಯ ಸಾಹಿತ್ಯಕ್ಕೆ ರೂಪುಕೊಟ್ಟ ಶ್ರೇಷ್ಠ ಕವಿಗಳಲ್ಲಿ ಕುವೆಂಪು ಪ್ರಮುಖರಾದವರು. ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ, ಶಿಕ್ಷಣ, ಜೀವನದರ್ಶನ, ವೈಚಾರಿಕತೆ, ವಿಶ್ವಮಾನವ ಸಂದೇಶ ಎಲ್ಲವನ್ನೂ ಒಳಗೊಂಡಂತೆ ಕರ್ನಾಟಕದ ಸಮಗ್ರ ಸಾಧನೆಯ ಸಂಕೇತವಾಗಿದ್ದರು. ನಿಸರ್ಗ ಪ್ರೀತಿ ಕೇವಲ ಸೌಂದರ್ಯನಿಷ್ಠವಾದುದಲ್ಲ, ಅದನ್ನು ಮೀರಿದ ಆಧ್ಯಾತ್ಮಿಕ ಅನ್ವೇಷಣೆ, ಹಾಗೂ ಸಾಕ್ಷಾತ್ಕಾರದ ಅನುಭವ, ಚೈತನ್ಯದ ಒಂದು ಅಂಶವೆಂದು ಅವರ ಅಭಿಪ್ರಾಯವಾಗಿತ್ತು. ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಸಾಹಿತ್ಯವನ್ನು ಗೌರಿಶಂಕರದೆತ್ತರಕ್ಕೆ ಬೆಳೆಸಿದ ಅಗಮಾನ್ಯ ಕವಿ ಕುವೆಂಪು.

ಕುವೆಂಪು ಅವರು ಜೀವನ ದರ್ಶನವನ್ನು ಬಾಲ್ಯದಿಂದಲೇ ರೂಢಿಸಿಕೊಂಡು ಬಂದವರು. ಮಲೆನಾಡಿನ ನಿಸರ್ಗ ಸೌಂದರ್ಯದ ವಿವಿಧ ಮುಖಗಳ ದಿವ್ಯದರ್ಶನದಿಂದ ಪ್ರಭಾವಿತರಾಗಿ ಅದರಿಂದ ಗಳಿಸಿದ ರಸಾನುಭೂತಿ, ಆತ್ಮದರ್ಶನ, ಸತ್ಯಶೋಧನೆ ಇವುಗಳು ಒಂದೆಡೆಯಾದರೆ, ಮತ್ತೊಂದೆಡೆಯಲ್ಲಿ ಶ್ರೀರಾಮಕೃಷ್ಣ

 ISBN Number: 978-93-342-6162-2

ಪರಮಹಂಸರು, ಸ್ವಾಮಿವಿವೇಕಾನಂದ, ಬುದ್ಧ, ಬಸವಣ್ಣ, ಅರವಿಂದರು, ಮಹಾತ್ಮಾ ಗಾಂಧೀಜಿ, ಈ ಮಹಾಪುರುಷರ ತತ್ವ, ಆದರ್ಶ, ಆಧ್ಯಾತ್ಮಿಕ ಪ್ರಭಾವಕ್ಕೆ ಒಳಗಾಗಿದ್ದರು. ಮಾನವನ ಬದುಕಿನ ಹಲವು ಆಯಾಮಗಳನ್ನು ತೀಕ್ಷ್ಣವಾದ ವಿಚಾರ, ವಿಮರ್ಶೆಗೆ ಒಳಪಡಿಸಿ, ತಾವು ಕಂಡುಕೊಂಡ ದರ್ಶನವನ್ನು ತಮ್ಮ ಸಾಹಿತ್ಯದಲ್ಲಿ ಕಾಣಿಸಿದರು.

'ದರ್ಶನ' ಎಂದರೆ ನಿಯಮಬದ್ಧವಾದ ಅಥವಾ ತರ್ಕಬದ್ಧವಾದ ಆಲೋಚನೆಗಳ ಸಮುದಾಯವಲ್ಲ. ಭಾವ, ಕಲ್ಪನೆ ಮತ್ತು ಆಲೋಚನೆಗಳಿಂದ ಹಾಗೂ ಧ್ಯಾನದಿಂದ ಅವಲೋಕನದಿಂದ ಮಾತ್ರ ಸಾಧ್ಯ. ಕುವೆಂಪು ಅವರು ಒಬ್ಬ ದಾರ್ಶನಿಕ ಬರಹಗಾರರು, ಜೊತೆಗೆ ತಾತ್ವಿಕ ಚಿಂತಕರು. ಆತ್ಮಾನುಭೂತಿಯೇ ಅವರ ಸರ್ವಸಾಧನೆಯ ಪರಮಗುರಿ. ಆಧ್ಯಾತ್ಮ ಮೂಲದ ಪ್ರೇಮ, ಲೋಕಾನುಭವ, ವಿಶ್ವಪ್ರಜ್ಞೆ, ದಾರ್ಶನಿಕತೆ, ಕುವೆಂಪು ಅವರ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿರುವ ಚಿಂತನೆಗಳು. ಅವರು ಶ್ರೇಷ್ಟ ತತ್ವಜ್ಞಾನಿಗಳು ಹೌದು. ವಿಶ್ವದ, ಜಗತ್ತಿನ ನಿಸರ್ಗದ ರಹಸ್ಯವನ್ನು ಭೇದಿಸಿ ಭಾವನೆಯ ನಿಜಸ್ಥಿತಿಯನ್ನು ಅರಿತವರಾಗಿದ್ದರು ಹಾಗೂ ಬಾಹ್ಯ ಪ್ರಕೃತಿಯ ವೈಜ್ಞಾನಿಕ ನಿಯಮಾವಳಿಗಳೊಂದಿಗೆ ಸಾಮರಸ್ಯವಿರುವುದು. ಕುವೆಂಪು ಅವರ ವೈಚಾರಿಕತೆ ದಾರ್ಶನಿಕತೆಯಿಂದ ಕೂಡಿದ್ದು "ಜಗತ್ತಿನಲ್ಲಿ ನನ್ನ ಸ್ಥಾನ ದಾರ್ಶನಿಕ ಕವಿಯದು" ಎಂದು ಹೇಳಿದ್ದಾರೆ. "ಬದುಕನ್ನು ಅನುಭವಿಸಿದ ದಾರ್ಶನಿಕರು" ಎಂದು ಹೇಳಬಹುದು.

ಕುವೆಂಪು ರಚಿಸಿದ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಬದುಕಿನ ವಾಸ್ತವ ಚಿತ್ರಣ, ಉದಾತ್ತವಾದ ಮಾನವ ಮೌಲ್ಯಗಳ ಪ್ರತಿಪಾದನೆ, ಸುಂದರ ಪ್ರಕೃತಿ ವರ್ಣನೆ ಹಾಗೂ ಗದ್ಯಶೈಲಿಯಿಂದ ಕನ್ನಡದ ಶ್ರೇಷ್ಠ ಕಾದಂಬರಿಯಾಗಿದೆ.

ಕಾನೂರು ಹೆಗ್ಗಡತಿ ಇಂದ್ರಿಯಗಮ್ಯತೆಯನ್ನು ಮೀರಿದ ಪ್ರಜ್ಞೆಯ ಬೇರೆ ಬೇರೆ ಸ್ತರಗಳಲ್ಲಿ ಸ್ಮೃತಿ–ವಿಸ್ಮೃತಿ–ಅಸ್ಮೃತಿ ಸಂಚರಿಸುತ್ತಾ ಒಂದು ಹೊಸ ನೆಲೆಯ ಅಗತ್ಯವನ್ನೇ ಸೃಷ್ಟಿಸುತ್ತದೆ. ಕಾದಂಬರಿಯ ರೂಪದರ್ಶನ ಹಾಗೂ ಅದ್ವಯ ತತ್ತ್ವದರ್ಶನಗಳು ಕಾದಂಬರಿಯಲ್ಲಿ ಅವತರಣಗೊಂಡಿವೆ. ಹಾಗಾದರೆ ಕಾನೂರು ಹೆಗ್ಗಡತಿ ಹೇಳುವ ಸತ್ಯವಾದರೂ ಏನು? ಅದು ನೀಡುವ ದರ್ಶನವಾದರೂ ಯಾವುದು? ಎಂದರೆ ಅದ್ವಯ ತತ್ವದ ಪೂರ್ಣದೃಷ್ಟಿಯಲ್ಲಿ ಮೂಡುವ ಆತ್ಮವಿಕಾಸದ ಕಥೆ. ಹೂವಯ್ಯನ ಪಾತ್ರ ಜಡ–ಚೇತನಗಳೆಂಬ ತಾರತಮ್ಯವಿಲ್ಲದೆ ಬರುವ ಗಿಡ, ಮರ, ತೊರೆ, ಪರ್ವತ, ಪಕ್ಷಿ, ಪ್ರಾಣಿಗಳು ವಿವಿಧ ಪ್ರಜ್ಞಾಸ್ತರಗಳಲ್ಲಿ ಎಲ್ಲರ, ಎಲ್ಲದರ ಕಥೆಯಾಗಿ ಸಮಗ್ರಗೊಳ್ಳುತ್ತದೆ. ಈ ಪೂರ್ಣದೃಷ್ಟಿಯ ರಾಚನಿಕತೆ ಆರಂಭವಾಗಿರುವುದನ್ನು ಇಲ್ಲಿ ಕಾಣಬಹುದು. ಪೂರ್ಣದೃಷ್ಟಿ ಎಂದರೆ ಪಾರಲೌಕಿಕ ಶಕ್ತಿ ಫಲವಲ್ಲ; ತನ್ನ ಪ್ರಜ್ಞಾಪರಿಧಿಯಲ್ಲಿರುವುದೆಲ್ಲವನ್ನೂ ಅವಿಭಾಜ್ಯವಾಗಿ ಗ್ರಹಿಸುವ ಮೂಲಕ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳುವುದು.

 ISBN Number: 978-93-342-6162-2

ಈ ಕಾದಂಬರಿಯಲ್ಲಿ ಬಹುಮುಖ್ಯವಾದ ಪಾತ್ರ ಹೂವಯ್ಯ, ಓರ್ವ ಆದರ್ಶವಾದಿ, ವೈಚಾರಿಕವಾಗಿ ಆಲೋಚಿಸುವುದು ಆತನ ಸಹಜ ಗುಣವಾಗಿತ್ತು ಹಾಗೂ ಅಲ್ಲಿನ ಪಾತ್ರಗಳು ಪ್ರಕೃತಿಯಲ್ಲಿಯೇ ಬೆರೆತುಹೋಗುವುದನ್ನು ಕಾಣುತ್ತೇವೆ. ಇಹ–ಪರ, ಲೌಕಿಕ–ಅಲೌಕಿಕ, ಒಳಗು–ಹೊರಗು, ಆಶೆ–ನಿರಾಶೆ, ಪ್ರೀತಿ–ದ್ವೇಷ, ಸುಖ–ದುಃಖ ಎಲ್ಲವೂ ಅಭಿವ್ಯಕ್ತಗೊಂಡಿವೆ. ಹೂವಯ್ಯ ಆದರ್ಶಗಳ ಸಾಕಾರಮೂರ್ತಿ. ತಾವು ಕಂಡುಕೊಂಡಿದ್ದ ಆದರ್ಶಗಳನ್ನು ತನ್ನ ವ್ಯಕ್ತಿತ್ವದಲ್ಲಿ ಹಾಗೂ ಅದನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ನಡೆಸುವ ಕ್ರಿಯಾಶೀಲ ವ್ಯಕ್ತಿಯಾಗಿ ಕಂಡುಬರುತ್ತಾನೆ.

ಹೂವಯ್ಯ ಮಾನವೀಯ ಪ್ರತಿರೂಪವೇ ಆಗಿದ್ದನು. ಪ್ರೀತಿ, ಅನುಕಂಪ, ಸ್ನೇಹ, ವಿಶ್ವಾಸ, ಉಪಕಾರ ಇಂತಹ ಗುಣಗಳನ್ನು ಹೊಂದಿದ್ದು, ವಿಶಾಲಹೃದಯದ ವ್ಯಕ್ತಿಯಾಗಿದ್ದ. ಹೂವಯ್ಯ ಮತ್ತು ಸೀತೆ ಇವರಿಬ್ಬರ ಪ್ರಣಯವೂ ಆದರ್ಶವಾದದ್ದೇ. ಅವರಿಬ್ಬರೂ ಒಬ್ಬರನ್ನೊಬ್ಬರು ಗಾಢವಾಗಿ ಪ್ರೇಮಿಸುತ್ತಿದ್ದರೂ ವಿವಾಹ ಸಾಧ್ಯವಾಗದೇ ಇದ್ದಾಗ, ಮಾತ್ಸರ್ಯ ಭಾವನೆಗೆ ಒಳಗಾಗದೆ, ತನ್ನ ಮನೋಸ್ಥೈರ್ಯ ಆಧ್ಯಾತ್ಮಿಕ ಸಾಧನೆಯ ಪರಿಣಾಮವಾಗಿ ಎಲ್ಲವನ್ನೂ ಮೀರಿ ಹೂವಯ್ಯ ಮಹಾನ್ ವ್ಯಕ್ತಿತ್ವವುಳ್ಳವನಾಗಿ, ನಿರ್ಮಲ ಮನಸ್ಸಿನ ಆದರ್ಶ ವ್ಯಕ್ತಿಯಾಗಿ ನಿಲ್ಲುತ್ತಾನೆ.

ಹೂವಯ್ಯ ವೈಚಾರಿಕ ದೃಷ್ಟಿಯನ್ನು ಹೊಂದಿದ್ದನು. ಅಸತ್ಯ, ಮೂಢ ನಂಬಿಕೆ, ದೇವರು ಧರ್ಮಗಳ ಹೆಸರಿನಲ್ಲಿ ಮುಗ್ಧ ಹಾಗೂ ಸ್ವಭಾವದ ಗ್ರಾಮೀಣ ಜನರ ಶೋಷಣೆಯನ್ನು ಹೂವಯ್ಯ ತೀವ್ರವಾಗಿ ಖಂಡಿಸುತ್ತಾನೆ. ಹೂವಯ್ಯನ ಪ್ರಭಾವದಿಂದ ಸುತ್ತಮುತ್ತಣ ಗ್ರಾಮಗಳ ಜನಜೀವನದಲ್ಲಿ ಬದಲಾವಣೆ ಸುಧಾರಣೆಗಳು ಹೂವಯ್ಯನ ಧ್ಯೇಯ, ಗುರಿ, ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

ಹೂವಯ್ಯನ ವೈಚಾರಿಕ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಪ್ರಕೃತಿಯೂ ಒಂದು ಪ್ರಮುಖ ಸಾಧನವಾಗಿತ್ತು. ಹೂವಯ್ಯನ ಹೃದಯ ವೈಶಾಲ್ಯತೆಯಿಂದಾಗಿ ಅವನ ಭಾವನೆಗಳೂ ಸಹ ಆಧ್ಯಾತ್ಮಿಕ ಸ್ವರೂಪವನ್ನು ಪಡೆದುಕೊಳ್ಳುವುದರಿಂದ ತನ್ನ ಚಿತ್ತ ಸಮತೋಲನವನ್ನು ತನ್ನ ಆಧ್ಯಾತ್ಮಿಕ ಸಾಧನೆಯಿಂದಲೇ ಪಡೆಯುತ್ತಾನೆ. ನಿಸರ್ಗದ ಸೌಂದರ್ಯವನ್ನು ಅನುಭವಿಸುತ್ತ ಅದರೊಡನೆ ತಾದಾತ್ಮ್ಯವನ್ನು ಹೊಂದಿ ಅನುಭಾವ ಸ್ಥಿತಿಯನ್ನು ಪಡೆಯುತ್ತಾನೆ. ಹೂವಯ್ಯ ಎಲ್ಲರ ಹಾಗೆ ಇದ್ದ ಒಬ್ಬ ಮನುಷ್ಯ. ಅವನ ಬಾಳಿನಲ್ಲಿಯೂ ಮಾನವ ಬದುಕಿನಲ್ಲಿ ಎದುರಾಗಬಹುದಾದ ಸಹಜ ಘಟನೆಗಳು ನಡೆದು, ಅನೇಕ ಸಂದಿಗ್ಧ ಸಂದರ್ಭದಲ್ಲಿ ಹೂವಯ್ಯ ಏಕಾಂಗಿಯಾಗಿ ಜನಶೂನ್ಯ ಪ್ರದೇಶದಲ್ಲಿ ಕುಳಿತು ದೈವ ಪ್ರಾರ್ಥನೆಯಲ್ಲಿ ತೊಡಗಿ, ಅವನ ಧ್ಯಾನಸ್ಥ ಮನಃಸ್ಥಿತಿ, ದಿವ್ಯಾನುಭವವನ್ನು ಪಡೆದು, ಇಂತಹ ಅನುಭವಗಳಿಂದಲೇ ಆಧ್ಯಾತ್ಮಿಕ ಉನ್ನತ ಮಟ್ಟಕ್ಕೆ ಏರಲು ಸಾಧ್ಯವಾಯಿತು.

 ISBN Number: 978-93-342-6162-2

ಹೂವಯ್ಯನ ಆಧ್ಯಾತ್ಮಿಕತೆಗಿಂತ ಮಿಗಿಲಾಗಿ, ಸಮಕಾಲೀನ ಸಾಮಾಜಿಕ ಬದುಕಿಗೆ ಆತ ಸ್ಪಂದಿಸಿದ ರೀತಿ, ಪರಿಸರದ ಕ್ಷುದ್ರತೆಯನ್ನು ಮೀರಿ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ಆತ್ಮಸಾಕ್ಷಿಗೆ ಅನುಸಾರವಾಗಿ ತನ್ನ ಒಳ ಅರಿವಿನ ಬೆಳಕಿನಲ್ಲಿ ಸಾರ್ಥಕವಾದ ಬದುಕು ನಡೆಸಲು ಪ್ರಾಮಾಣಿಕ ಪ್ರಯತ್ನ ನಡೆಸಿ, ಹೂವಯ್ಯ ಭಾವಜೀವಿಯಾಗಿದ್ದರೂ, ಸಮೂಹದ ಬದುಕಿನೊಡನೆ ಬೆರೆತು ಪ್ರತಿಕ್ರಿಯೆ ನೀಡುವ ಸಂದರ್ಭದಲ್ಲಿ ಜೀವವಿರೋಧಿಯಾದ ಎಲ್ಲ ಸಂಗತಿಗಳನ್ನು ವಿರೋಧಿಸಿ ವೈಚಾರಿಕ ನೆಲೆಯಲ್ಲಿ ನಿಲ್ಲುತ್ತಾನೆ. ಸಾಮಾಜಿಕ ಸ್ಥಿತ್ಯಂತರಗಳು, ತೀವ್ರಗತಿಯಲ್ಲಿ ನಡೆಯದೇ ಹೋಗುವುದಕ್ಕೆ ಅಂದಿನ ಪರಿಸರವು ಕಾರಣವಾಗಿತ್ತು. ಹೀಗೆ ವೈವಿಧ್ಯಮಯವಾದ ಜೀವನ ದರ್ಶನವನ್ನು ಕಾದಂಬರಿ ಕಟ್ಟಿಕೊಡುತ್ತದೆ.

ಆದರ್ಶವಾದದೊಂದಿಗೆ ತನ್ನ ಸುತ್ತಲಿನ ವಾಸ್ತವವನ್ನು ಬದಲಿಸಿ ತಾನು ಬದುಕುತ್ತಿರುವ ಸಂಸ್ಕೃತಿ ಪ್ರಪಂಚದಲ್ಲಿ ಆದರ್ಶವಾದದ ಅನ್ವಯದ ಮಿತಿಗಳು ಅರಿವಿಗೆ ಬರತೊಡಗುತ್ತವೆ. ಹೂವಯ್ಯನಿಗೆ ಸುತ್ತಲಿನ ಪ್ರಪಂಚ ಮೂರ್ಛೆರೋಗದಂತೆ ಕಾಣುತ್ತಿದ್ದ ಅವನ ಭಾವ ಸಮಾಧಿಯ ಸ್ವರೂಪವೂ ಬದಲಾಗುತ್ತ ಸತ್ಯದರ್ಶನವಾಗುತ್ತದೆ. ತನ್ನ ವೈಯಕ್ತಿಕ ಜೀವನದಿಂದ ಬೇಸತ್ತು, ಹಿಂಸೆಯಿಂದ ಜರ್ಝರಿತವಾಗಿ ವಿವಿಧ ಸ್ತರಗಳ ಧ್ಯಾನಾವಸ್ಥೆಗಳ ಮೂಲಕ ಹಾದುಹೋಗಿ ಅಂತಿಮವಾಗಿ ಸತ್ಯದ ಸಾಕ್ಷಾತ್ಕಾರಕ್ಕಾಗಿ ಆರಿಸಿಕೊಳ್ಳುವುದು ಬುದ್ಧ ದರ್ಶನವನ್ನು.

ಪ್ರಕೃತಿಯ ಮುಯ್ಯಿಗೆ ಸಿಕ್ಕು ಜರ್ಝರಿತನಾಗಿದ್ದ ಹೂವಯ್ಯನಿಗೆ ಬುದ್ಧ ದರ್ಶನ ಪ್ರಕೃತಿಯನ್ನು ಗೆದ್ದು ಮೋಹ ಪಾಶದಿಂದ ಬಿಡುಗಡೆ ಹೊಂದುವ ಹಾದಿಯನ್ನು ತೋರಿಸುತ್ತದೆ. ಇದೊಂದು ರೀತಿಯ ಆಧ್ಯಾತ್ಮಿಕ Catharsis ಹಾಗಾಗಿಯೇ ಆ ತೀವ್ರತೆ : ನಂತರ ಆ ಶಾಂತಿ ಹೂವಯ್ಯನಿಗೆ ಪುನರ್ಜನ್ಮ ಬಂದ ಹಾಗಿತ್ತು.

ಹೂವಯ್ಯನಿಗೆ ಮಲೆನಾಡಿನ ವಾತಾವರಣದಲ್ಲಿ ಸಹ್ಯಾದ್ರಿಯ ಪರ್ವತಶ್ರೇಣಿ ದೇವತಾಸತ್ವವಾಗಿ ಪರಣಿಮಿಸಿತು. ಅತೀಂದ್ರಿಯಗಳ ನಿಗ್ರಹಕ್ಕೆ ಬದುಕು ಪ್ರೇರಣೆಯಾಯಿತು. ಬೌದ್ಧಧರ್ಮದ ವ್ಯಾಖ್ಯಾನಗಳನ್ನು ಕಂಡುಕೊಂಡು, ಬುದ್ಧನ ತತ್ವಗಳ ಕಡೆಗೆ ಅವನ ದೃಷ್ಟಿ ಹರಿಯಿತು. ಬದುಕಿನಲ್ಲಿ ಆಧ್ಯಾತ್ಮಿಕತೆಯ ಆಳವನ್ನು ಅರಿತು, ಶಾಶ್ವತ ತತ್ತ್ವಗಳನ್ನು ಅನುಸರಿಸಿ, ಮನುಷ್ಯನ ಸಂಪೂರ್ಣ ವಿಕಾಸದ ದರ್ಶನವನ್ನು ಪಡೆದು, ಭಾವ, ಕಲ್ಪನೆ, ಆಲೋಚನೆಗಳ ಪ್ರತಿಭಾ ಲಕ್ಷಣದ ಸಾಕ್ಷಾತ್ಕಾರವಾಗುತ್ತದೆ.

ಪರಾಮರ್ಶನ ಗ್ರಂಥಗಳು

1) ಕುವೆಂಪು ಸಾಹಿತ್ಯ ಸಮೀಕ್ಷೆ – ಆಹಿತಾನಲ – 2004 ವಸಂತ ಪ್ರಕಾಶನ

 ISBN Number: 978-93-342-6162-2

2) ಕುವೆಂಪು ಒಂದು ಪುನರನ್ವೇಷಣೆ ಡಿ.ಎಸ್.ನಾಗಭೂಷಣ–2011 - ಗೀತಾಂಜಲಿ ಪುಸ್ತಕ ಪ್ರಕಾಶನ.

3) ಕನ್ನಡದ ಕಲ್ಪತರು ಕುವೆಂಪು – ಸಿ.ಎನ್. ಕೃಷ್ಣಮೂರ್ತಿ-2017, ಪೂರ್ಣಿಮಾ ಪ್ರಿಂಟರ್ಸ್

4) ಬಾ ಕುವೆಂಪು ದರ್ಶನಕೆ–ಕುವೆಂಪು ಸಮಸ್ತ ಸಾಹಿತ್ಯ ಶೋಧ ನರಹಳ್ಳಿ ಬಾಲಸುಬ್ರಹ್ಮಣ್ಯ – 2019 – ಧರಣಿ ಪ್ರಿಂಟರ್ಸ್,

ಸರಳ ಸಜ್ಜನಿಕೆಯ ವ್ಯಕ್ತಿತ್ವದ ಸಂಶೋಧಕ – ಬೆನೆಟ್ ಜಿ ಅಮ್ಮನ್ನ

ಸರಿತ ಮಾಬೆನ್
ಸಂಶೋಧನಾ ವಿದ್ಯಾರ್ಥಿನಿ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಡಾ||.ರಾಜೇಶ್ ಬೆಜ್ಜಂಗಳ
ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಕನ್ನಡ ಸಾಹಿತ್ಯವು ಸಾವಿರಾರು ವರ್ಷಗಳ ಪರಂಪರೆ ಹೊಂದಿರುವ ಅಪಾರ ಜ್ಞಾನ ಸಂಪತ್ತಾಗಿದೆ. ಈ ಸಾಹಿತ್ಯಧಾರೆಯಲ್ಲಿ ಜನತೆಗೆ ಜ್ಞಾನವನ್ನು ಹಂಚಿ, ಭಾಷೆಯ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸುವಲ್ಲಿ ಅನೇಕರು ತಮ್ಮ ಜೀವನವನ್ನು ಸಮರ್ಪಿಸಿದ್ದಾರೆ ಅವರ ಪೈಕಿ ಶ್ರೀಯುತ ಬೆನೆಟ್ ಅಮ್ಮನ್ನವರು. ಇವರು ಬಾಸೆಲ್ ಮಿಶನ್ ಗೆ ಸಂಬಂಧಿಸಿದ ಸಂಶೋಧನೆಗಳ ಸಂದರ್ಭದಲ್ಲಿ ನೆನಪಿಗೆ ಬರುವ ಸರಳ, ಸಜ್ಜನಿಕೆಯ ವ್ಯಕ್ತಿತ್ವವುಳ್ಳವರು. ಕಳೆದ ೩೮ ವರ್ಷಗಳಿಂದ ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಗ್ರಂಥಾಲಯ ಮತ್ತು ಪತ್ರಾಗಾರದಲ್ಲಿ ४೦ ವರ್ಷಗಳ ಸೇವೆ ಸಲ್ಲಿಸಿ ನಿವೃತರಾದವರು. ನೂರಾರು ಸಂಶೋಧಕರಿಗೆ ನೆರವಾಗುವುದರೊಂದಿಗೆ ನಿರಂತರವಾಗಿ ಸಂಶೋಧನಾತ್ಮಕ ಬರವಣಿಗೆಗಳ ಮೂಲಕ ಗುರುತಿಸಿಕೊಂಡಿರುವವರು. ಮಿಶನರಿಗಳ ಹಾಗೂ ವಿದೇಶಿಯರ ಬರವಣಿಗೆಗಳಿಗೆ ಸಂಬಂಧಿಸಿದಂತೆ ಇವರೊಂದು ಮಾಹಿತಿ ಕೋಶ.

 ISBN Number: 978-93-342-6162-2

ತುಳುನಾಡಿನ ಸಾಹಿತ್ಯ, ಶಿಕ್ಷಣ, ಬರವಣಿಗೆಗೆ, ಸಂಸ್ಕೃತಿಗೆ ವಿದೇಶಿಯರ ಕೊಡುಗೆಗಳು, ಮಿಶನರಿಗಳ ಚರಿತ್ರೆ, ಸಭಾ ಚರಿತ್ರೆ, ತುಳುನಾಡಿನ ಚರಿತ್ರೆಯ ಬಗ್ಗೆ ಸಂಶೋಧನೆ, ದಾಖಲೀಕರಣ, ಹಸ್ತಪ್ರತಿ ಸಂರಕ್ಷಣೆ, ಓದು, ಬರಹ ತುಳು– ಕನ್ನಡ ತರ್ಜುಮೆ, ಸಂಗೀತ ಹಾಗೂ ನಿರಂತರ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಯುತ ಬೆನೆಟ್ ಅಮ್ಮನ್ನವರು ಹುಟ್ಟಿದ್ದು ಉಡುಪಿ ಜಿಲ್ಲೆಯ ಪಾಂಗಾಳ ಗುಡ್ಡೆ ಎಂಬ ಸ್ಥಳದಲ್ಲಿ. ಇವರ ತಂದೆ ಶಿಕ್ಷಕರಾದ ರಮಣ ಅಮ್ಮನ್ನ, ತಾಯಿ ಪಾರಂಪರಿಕ ವೈದ್ಯಯಾದ ಶ್ರೀಮತಿ ಸರೋಜಿನಿ ಪ್ರೇಮಾವತಿ ಅಮ್ಮನ್ನ. ಕರಾವಳಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ, ತಮ್ಮ ಸಾಹಿತ್ಯ ಕೃತಿಗಳ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ಮಾತ್ರವಲ್ಲದೇ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಯುವ ಪೀಳಿಗೆಗೆ, ಸಮಾಜಮುಖಿ ಚಿಂತನೆಗೆ ಪ್ರೇರೇಣೆಯಾದ್ದಾರೆ. ಬೆನ್ನೆಟ್ ಅಮ್ಮನ್ನರವರ ಕೃತಿಗಳು ಸರಳ ಶೈಲಿ, ಮನ ಮುಟ್ಟುವ ವಸ್ತು, ಸಂಶೋಧನಾ ಪ್ರಜ್ಞೆ ಹಾಗೂ ಓದುಗರ ಹೃದಯದಲ್ಲಿ ಉಳಿಯುವ ಶಕ್ತಿ ಹೊಂದಿದೆ. ಬಹುತೇಕ ಇವರು ಬರೆದ ಲೇಖನಗಳು ಅವರೇ ಮೂಲ ಆಕರಗಳನ್ನು ಶೋಧಿಸಿ ಬರೆದಂತವು ಈ ಕೆಳಗಿನಂತಿವೆ.

ಶ್ರೀಯುತ ಬೆನೆಟ್ ಅಮ್ಮನ್ನವರ ಪ್ರಕಟಿತ ಕೃತಿಗಳು :

೧. ಚಿಗುರಿದ ಬದುಕು (ಕಿರು ಕಾದಂಬರಿ ೧೯೯೬)

೨. ಕ್ರೈಸ್ತರು ಮತ್ತು ಬಾಸೆಲ್ ಮಿಶನ್ (೨೦೦೫)

೩. ಗಾನ ಗೊಂಚಲು (ಸಂಕಲನ ೨೦೦೬)

೪. ಜಾನ್ ಜೇಮ್ಸ್ ಬ್ರಿಗೆಲ್ – ಬದ್‌ಕ್ ಬೊಕ್ಕ ಬರವು (೨೦೧೨)

೫. ತುಳುನಾಡಿನಲ್ಲಿ ಬಾಸೆಲ್ ಮಿಶನ್ ಮತ್ತಿತರ ಲೇಖನಗಳು

೬. ಕಾರ್ಕಳದಲ್ಲಿ ಕ್ರೈಸ್ತರು – ಒಂದು ಅಧ್ಯಯನ (ಡಾ. ಪಿಯೊಸ್ ಫೆಡಲಿಸ್ ಪಿಂಟೋ ಮತ್ತು ಕಾಸ್ತಲಿನೋರೊಂದಿಗೆ)

೭. ತುಳು ಭಾಷೆಡ ಕ್ರೈಸ್ತರ ಧರ್ಮಗ್ರಂಥ “ಪೊಸ ಒಡಂಬಡಿಕೆ” ಒಂಜಿ ಪೊಲಬು,

ಬಾಸೆಲ್ ಮಿಶನರಿಗಳು ತುಳು ಟಿಪ್ಪಣೆಗಳು (೨೦೧೫) ತುಳು ವಿಕ್ರಮಾರ್ಕ ಕತೆ' (೨೦೧೪), ಕೋಟಿ ಚೆನ್ನಯ, “ಅಪ್ರಕಟಿತ ತುಳು ಪಾಡ್ದನಗಳು,” “ತುಳು ಪಂಚತಂತ್ರ”, ತುಳು ಗಾದೆಗಳು ಎಂಬ ಕೃತಿಗಳನ್ನು ಡಾ॥ ದುರ್ಗಾ ಪ್ರವೀಣ್ ರವರೊಂದಿಗೆ, “ಕನ್ನಡದ ಮೊದಲ ಪತ್ರಿಕೆ ಹೆರ್ಮನ್ ಫ್ರೆಡ್ರಿಕ್ ಮೋಗ್ಲಿಂಗ್ ಸಂಪಾದಿತ ಮೊದಲ

 ISBN Number: 978-93-342-6162-2

ಪತ್ರಿಕೆ ಹೆರ್ಮನ್ ಫ್ರೆಡ್ರಿಕ್ ಮೋಗ್ಲಿಂಗ್ ಸಂಪಾದಿತ ಮಂಗಳೂರು ಸಮಾಚಾರ – ಕಂನಡ ಸಮಾಚಾರವು ಎಂಬ ಕೃತಿಯನ್ನು ಡಾ. ಸಾಯಿಗೀತಾರವರೊಂದಿಗೆ ಶ್ರೀಯುತ ಬೆನೆಟ್ ಅಮ್ಮನ್ನರವರ ಸಂಪಾದಿಸಿರುತ್ತಾರೆ.

ಕೆಲವು ಕೃತಿಗಳ ಬಗ್ಗೆ

ಬೆನೆಟ್ ಅಮ್ಮನ್ನರವರ ತುಳು ನಾಡಿನಲ್ಲಿ ಬಾಸೆಲ್ ಮಿಶನ್ ಮತ್ತಿತರ ಲೇಖನಗಳು" ಎಂಬ ಕೃತಿಯು ಬಾಸೆಲ್ ಮಿಶನ್ ಸಂಸ್ಥೆಯ ಮುದ್ರಣ ಸಂಸ್ಕೃತಿ, ಶಿಕ್ಷಣ, ಕನ್ನಡ ಮತ್ತು ತುಳು ಸಾಹಿತ್ಯ , ಕೃಷಿ ಮುಂತಾದ ಕ್ಷೇತ್ರದಲ್ಲಿ ನೀಡಿದ ಕೊಡುಗೆಯನ್ನು ಶೈಕ್ಷಣಿಕವಾಗಿ ಹಿಂದುಳಿದವರ ಅಭಿವೃದ್ಧಿ, ಸ್ವದೇಶಾಭಿಮಾನ, ಸ್ವಾವಲಂಬನೆ, ವಿದೇಶಿಯರೊಂದಿಗೆ ದೇಶಿಯರು, ನಶಿಸುತ್ತಿರುವ ಕಸುಬುಗಳು ಓದುವಿಕೆ ಮತ್ತು ಗ್ರಂಥ ಸಂರಕ್ಷಣೆಯ ವಿಧಾನ ಮೊದಲಾದ ವೈಶಿಷ್ಟ ಪೂರ್ಣ ಲೇಖನಗಳು ಈ ಕೃತಿಯಲ್ಲಿವೆ.

ಬೆನೆಟ್ ಅಮ್ಮನ್ನರವರ **'ಚಿಗುರಿದ ಬದುಕು'** ಸಣ್ಣಕಥೆಯಲ್ಲಿ ಸಮಾಜವನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಯೊಂದನ್ನು ಎತ್ತಿಕೊಂಡು ಅದನ್ನು ಕತೆಯ ರೂಪದಲ್ಲಿ, ಸರಳ ನೇರ ನಡೆಯಿಂದಾಗಿ ಸಾಮಾನ್ಯ ಓದುಗರ ಮನಸ್ಸನ್ನು ಮುಟ್ಟುವುದಲ್ಲದೇ, ಮಾನವೀಯ ಮೌಲ್ಯವನ್ನೇ ಆಧರಿಸಿಕೊಂಡಿರುವುದು ಈ ಕೃತಿಯ ವಿಶೇಷ. ಹೆರ್ಮನ್ ಫ್ರೆಡ್ರಿಕ್ ಮೋಗ್ಲಿಂಗ್ ಸಂಪಾದಿಸಿರುವ 'ಮಂಗಳೂರು ಸಮಾಚಾರ' ಮತ್ತು ಕಂನಡ ಸಮಾಚಾರವು ಎಂಬ ಈ ಕೃತಿಯನ್ನು ಸಂಕಲಿಸಿದ ಬೆನೆಟ್ ಅಮ್ಮನ್ನ ಮತ್ತು ಡಾ॥ ಸಾಯಿಗೀತಾ ಅವರು ೧೮೪೩ ಜುಲೈಯಿಂದ ೧೮೪೪ ಫೆಬ್ರವರಿವರೆಗೆ ಬಂದಿರುವ ೩೯ ಪತ್ರಿಕೆಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಪ್ರಾದೇಶಿಕ ಇತಿಹಾಸ, ಸಾಹಿತ್ಯ, ಭಾಷಾ ಸ್ವರೂಪ ಹಾಗೂ ಸಾಮಾಜಿಕ ಸ್ಥಿತಿಗತಿಗಳ ನೆಲೆಯಿಂದ ಇದು ಮಹತ್ವದ ಕೃತಿಯಾಗಿದೆ.

"ಬಾಸೆಲ್ ಮಿಶನರಿಗಳ ತುಳು ಟಿಪ್ಪಣೆಗಳು" ಕೃತಿಯಲ್ಲಿ ಪತ್ರಾಗಾರದಲ್ಲಿ ಸುರಕ್ಷಿತವಾಗಿರುವ ಬರವಣೆಗೆಗಳು, ಕಡತ, ದಾಖಲೆ, ಪುಸ್ತಕಗಳಲ್ಲಿ ಬಹು ಅಮೂಲ್ಯವಾದ ಸಂಶೋಧನಾತ್ಮಕ ದಾಖಲೆಗಳು ಹುದುಗಿವೆ. ಈ ಮಿಶನರಿಗಳ ಅಪ್ರಕಟಿತ ಬರಹಗಳನ್ನು ಆರಿಸಿ ಅಭ್ಯಸಿಸಿ ಅವುಗಳ ಒಳಗೆ ಇರುವ ವಿಷಯಗಳ ಬಗ್ಗೆ ಆಳವಾದ ಸಂಶೋಧನೆ ನಡೆಸಿ ತಮ್ಮ ಕ್ಷೇತ್ರಕಾರ್ಯದ ಮೂಲಕ ಕುತೂಹಲಕರವಾದ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಅಧ್ಯಯನ ದೃಷ್ಟಿಯಿಂದ ಪುಸ್ತಕವನ್ನು ನಾಲ್ಕು ಭಾಗಗಳಾಗಿ ಮಾಡಲಾಗಿದ್ದು, ಮೊದಲ ವಿಭಾಗದಲ್ಲಿ ಶಕುನ, ಮೂಲಿಗೆ, ಅಳಿಯ ಸಂತಾನದ ಹಿನ್ನಲೆ, ಜೈನರು ರಾತ್ರಿ ಏಕೆ ಊಟ ಮಾಡುವುದಿಲ್ಲವೆಂಬ ವಿಷಯ, ಮದುವೆ, ಜಾತಿಯ ಕ್ರಮ, ನೂಲು ಹುಣ್ಣಿಮೆಯ ಕ್ರಮ ಹೀಗೆ ತುಳುನಾಡಿನ ಬದುಕಿನಲ್ಲಿ ವಿಭಿನ್ನ

 ISBN Number: 978-93-342-6162-2

ವಿವರಗಳೆಲ್ಲ ಬಂದಿವೆ. ಎರಡನೇ ವಿಭಾಗದಲ್ಲಿ ಬಪ್ಪನಾಡು, ಉಂಡಾರ್, ಅತ್ತೂರು, ಮೂಡಬಿದ್ರೆ, ಪುತ್ತೆ ಮುಂತಾದ ಸ್ಥಳಗಳಲ್ಲಿರುವ ದೇವಸ್ಥಾನಗಳ ಸ್ಥಳ ಪುರಾಣಗಳಿವೆ. ಮೂರನೇ ಭಾಗದಲ್ಲಿ ಶಾಪ, ಆಣೆ, ಮಾಟ ಮಂತ್ರಗಳಿಗೆ ಸಂಬಂಧಿಸಿದ ಟಿಪ್ಪಣೆಗಳಿದ್ದು, ನಾಲ್ಕನೇ ಭಾಗದಲ್ಲಿ ೬ ಕಥೆಗಳಿವೆ. ಧರ್ಮ ಪ್ರಚಾರದಲ್ಲಿ ಬಳಸಲಾಗುತ್ತಿದ್ದ ಈ ಕಥೆಗಳಲ್ಲಿ ನೀತಿ ಭೋದನೆಯೂ ಇದ್ದು, ಜನ ಸಾಮಾನ್ಯರಲ್ಲಿ ಇದ್ದ ಮದ್ಯಪಾನ, ಜೂಜಾಟದಂತಹ ಕೆಡುಕುಗಳನ್ನು ದೂರೀಕರಿಸಲು ಈ ಕಥೆಗಳನ್ನು ಬಳಸಿರುವುದು ಗುರುತಿಸಲಾಗಿದೆ. ಅಂದಿನ ತುಳುನಾಡಿನ ಬದುಕು, ಭಾಷೆ, ನಂಬಿಕೆಗಳು, ರೀತಿ ರಿವಾಜು, ಭೂತಗಳ ಭಾಷಾ ನುಡಿಕಟ್ಟು, ಸಾಂಸ್ಕೃತಿಕ ಸೊಗಡು ಮುಂತಾಗಿ ಅಪರೂಪದ ವಿವರಗಳೆಲ್ಲವನ್ನು ಕೃತಿಯಲ್ಲಿ ನೀಡಲಾಗಿದೆ.

ನಿರಂತರ ಸಂಶೋಧನೆಯೊಂದಿಗೆ 'ಕುರಲ್ ಇಷ್ಟೆರ್; 'ಕುಡ್ಲ' 'ತುಳು ಪರಿಷತ್' 'ತುಳು ಬೈಬಲ್ ತರ್ಜುಮೆ ಸಮಿತಿ' ಸದಸ್ಯರಾಗಿ 'ತುಳು ವಿಕಿಪಿಡಿಯಾ' ಸಂಪಾದಕರಾಗಿ, 'ಬಲ್ಮಕೊ'ದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ೨೦೧೫–೨೦೧೭ ಸಾಲಿನಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು ಅಕಾಡೆಮಿಯ ಗ್ರಂಥಾಲಯ ಮತ್ತು ಪತ್ರಾಗಾರವನ್ನು ವ್ಯವಸ್ಥಿತವಾಗಿ ರೂಪಿಸಿದ್ದಾರೆ. 'ಮದಿಪು' ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

<u>ಸನ್ಮಾನ ಗೌರವಗಳು</u>

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಂಶೋಧನೆ ಪತ್ರಾಗಾರ ಸೇವಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ೨೦೧೪ ರಲ್ಲಿ ಸನ್ಮಾನ ವಿಶ್ವ ತುಳುವೆರೆ ಆಯನೊ, ಬದಿಯಡ್ಕ ೨೦೧೬ರಲ್ಲಿ ಸನ್ಮಾನ, ತುಳು ಸಮ್ಮೇಳನ ಸಮಿತಿ, ಮುಲ್ಕಿ ಇದರ ವತಿಯಿಂದ ೨೦೧೬ ರಲ್ಲಿ ತುಳುವ ಐಸಿರಿದ ಪತ್ರ, ಪಿಂಗಾರ ಬಳಗದಿಂದ ೨೦೧೬ರಲ್ಲಿ 'ಪಿಂಗಾರ ಮೋಗ್ಲಿಂಗ್ ಸನ್ಮಾನ' ಪ್ರೈಟೆಸ್ಟೆಂಟ್ ಕ್ರಿಶ್ಚಿಯನ್ ವೆಲ್ ಫೇರ್ ಎಸೋಸಿಯೇಶನ್ ರವರ ವತಿಯಿಂದ ೨೦೧೭ ರಲ್ಲಿ ಅಭಿನಂದನಾ ಪತ್ರ, ಹಸ್ತ ಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗೂ ಸುದಾನ – ಕಿಟೆಲ್ ಸೆಂಟರ್ ಫಾರ್ ಡೆವಲಪ್‌ಮೆಂಟ್ ಸ್ಟಡೀಸ್, ಪುತ್ತೂರಿನಲ್ಲಿ ನಡೆದ ಅಖಿಲ ಕರ್ನಾಟಕ ಹದಿನೆಂಟನೆಯ ಹಸ್ತಪ್ರತಿ ಸಮ್ಮೇಳನ ೨೦೨೨ ರಲ್ಲಿ ಸನ್ಮಾನ, ಪೊಳಲಿ ಶೀನಪ್ಪ ಹೆಗ್ಗಡೆ ಮತ್ತು ಎಸ್. ಆರ್ ಹೆಗ್ಡೆ ೨೦೨೪ ರಲ್ಲಿ ಪ್ರಶಸ್ತಿ, ೨೦೨೫ರಲ್ಲಿ ಸಂತ ಅಲೋಷಿಯಸ್ ಪರಿಗಣಿತ ವಿಶ್ವವಿದ್ಯಾಲಯದಿಂದ "ಐಸಿರಿ ಪ್ರಶಸ್ತಿ" ಹಾಗೂ ವಿಶುಕುಮಾರ್ ಪ್ರಶಸ್ತಿಯನ್ನು ಪಡೆದಿದ್ದಾರೆ.

 ISBN Number: 978-93-342-6162-2

ಹೀಗೆ ಬೆನೆಟ್ ಅಮ್ಮನ್ನವರು ವೃತ್ತಿಯಿಂದ ನಿವೃತರಾದರೂ ತಮ್ಮಲ್ಲಿರುವ ಪುಸ್ತಕ ಸಂಗ್ರಹ, ತಮ್ಮ ಪುಸ್ತಕದಲ್ಲಿರುವ ಮಾಹಿತಿಗಳ ಬಗೆಗೆ ಓದುಗರಿಗೆ, ಸಂಶೋದಕರಿಗೆ ಮಾಹಿತಿ ನೀಡುವುದನ್ನು ಮುಂದುವರಿಸುತ್ತಾ ಬರವಣಿಗೆಯಲ್ಲಿ ಹಾಗೂ ಸಂಶೋದನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಓದು, ಜ್ಞಾನ, ಭಾಷೆ ಮೇಲಿರುವ ಪ್ರೀತಿ ಮತ್ತು ಅದನ್ನು ಹಂಚುವ ಮನಸ್ಸು ನಮ್ಮೆಲರಿಗೂ ಮಾದರಿಯಾಗಿದೆ.

ಆಕರ ಗ್ರಂಥಗಳು

೧. ಬೆನೆಟ್ ಜಿ ಅಮ್ಮನ್ನ, ೨೦೦೫ , ಬಿಲ್ಲವರು ಮತ್ತು ಕ್ರೈಸ್ತರು ಕ್ರಿಸ್ತವಂದನ ಚರ್ಚ್ ೧೫೦ ನೇ ವರ್ಷಾಚರಣೆ ಸಮಿತಿ, ಪಾಂಗಳಗುಡ್ಡೆ, ಉಡುಪಿ.

೨. ಬೆನೆಟ್ ಜಿ. ಅಮ್ಮನ್ನ – ೨೦೧೫, ಶಿಕ್ಷಣಕ್ಕೆ ವಿದೇಶೀ ಮಿಶನರಿಗಳ ಮತ್ತು ದೇಶಿಯ ಕ್ರೈಸ್ತರ ಕೊಡುಗೆ, ಕರ್ನಾಟಕ ಸದರ್ನ್ ಡಯಾಸಿಸ್ ಎಜುಕೇಶನ್ ಸೊಸೈಟಿ, ಮಂಗಳೂರು.

೩. ಜಾನ್ ಜೇಮ್ಸ್ ಬ್ರಿಗೆಲ್ (೧೮೩೨–೧೮೮೭) ಬೆನೆಟ್ ಜಿ ಅಮ್ಮನ್ನ, ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೪. ತುಳುನಾಡಿನಲ್ಲಿ ಬಾಸೆಲ್ ಮಿಷನ್ ಮತ್ತು ಇತರ ಲೇಖನಗಳು – ಬೆನೆಟ್ ಜಿ ಅಮ್ಮನ್ನ, ಅಂಕನ ಹಳ್ಳಿ ಪ್ರಕಾಶನ, ಬೆಂಗಳೂರು.

 ISBN Number: 978-93-342-6162-2

ಬದುಕಿನಲ್ಲಿ ಹಾಸ್ಯ

ಕವಿತಾ. ಆರ್
ಸಂಶೋಧನ ವಿದ್ಯಾರ್ಥಿ,
ಸಾಮಾಜಿಕ & ಮಾನವೀಯತೆ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,

ಡಾ, ರಾಜೇಶ್ ಬೆಜ್ಜಂಗಳ
ಪ್ರಾಧ್ಯಾಪಕರು, ಹಾಗು ಮಾರ್ಗದರ್ಶಕರು
ಸಾಮಾಜಿಕ & ಮಾನವೀಯತೆ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,

ಪೀಠಿಕೆ :– ಎಂ.ಎಸ್. ಸುಂಕಾಪುರರವರು ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಎಂಬುದನ್ನು ಉತ್ತಮ ಪೀಠಿಕೆಯೊಂದಿಗೆ ಪ್ರಾರಂಭಿಸಿದ್ದಾರೆ ಇವರು ಹೇಳುವ ಹಾಗೆ ಹಾಸ್ಯವು ಜೀವನದಲ್ಲಿ ಮಹತ್ವದ ಸ್ಥಾನವನ್ನು ಪಡೆದಂತೆ ಜಗತ್ತಿನ ಸಾಹಿತ್ಯದಲ್ಲಿಯೂ ಹಿರಿಯ ಸ್ಥಾನವನ್ನು ಗಳಿಸಿಕೊಂಡಿದೆ. ಆಂಗ್ಲ ಸಾಹಿತ್ಯವು ಆಧುನಿಕ ಯುಗದಲ್ಲಿ ಹಾಸ್ಯದ ಹಿರಿಮೆಯನ್ನು ಎತ್ತಿ ತೋರಿಸುತ್ತದೆ. ಮತ, ಧರ್ಮ, ತತ್ವ ಇವುಗಳ ವಿವೇಚನೆಗೆ ಮಹತ್ವದ ಸ್ಥಾನವನ್ನು ಕೊಟ್ಟ ಭಾರತೀಯರು ತಮ್ಮ ಸಾಹಿತ್ಯದಲ್ಲಿ ಹಾಸ್ಯರಸಕ್ಕೆ ಯೋಗ್ಯ ಸ್ಥಾನವನ್ನಿತ್ತಿಲ್ಲವೆಂಬುದು ಪಾಶ್ಚತ್ಯ ವಿಮರ್ಶಕರ ಅಭಿಪ್ರಾಯವಾಗಿದೆ. ಕನ್ನಡ ಸಾಹಿತ್ಯವೂ ಈ ನಿಯಮಕ್ಕೆ ಅಪವಾದವಾಗಿಲ್ಲವೆಂಬ ಅಭಿಪ್ರಾಯವನ್ನು ವಿಮರ್ಶಕರು ವ್ಯಕ್ತಪಡಿಸುತ್ತ ಬಂದಿರುವರು. ಆದರೆ ಈ ವಿಷಯದ ಸೂಕ್ಷ್ಮ ವಿವೇಚನೆ ಇದುವರೆಗೂ ಆದಂತಿಲ್ಲ.

 ISBN Number: 978-93-342-6162-2

ಕನ್ನಡ ಸಾಹಿತ್ಯದಲ್ಲಿ ಹಾಸ್ಯರಸವು ಯಾವ ರೀತಿಯಾಗಿ ಪ್ರವಹಿಸುತ್ತ ಬಂದಿದೆಯೆಂಬುದನ್ನು ವಿಚಾರಿಸುವುದೇ ಈ ಪ್ರಬಂಧದ ಧ್ಯೆಯವಾಗಿದೆ.

ಪ್ರಬಂಧದಲ್ಲಿ ಮೂರು ಭಾಗಗಳಿವೆ ಎಂದಿದ್ದಾರೆ :

೧) ನಗೆ

೨) ಹಾಸ್ಯ

೩) ಕನ್ನಡ ಸಾಹಿತ್ಯದಲ್ಲಿ ಹಾಸ್ಯ

ಮೊದಲನೆಯ ಭಾಗದಲ್ಲಿ ಆರು ವಿಭಾಗಗಳನ್ನು ಮಾಡಲಾಗಿದ್ದು, ಅವುಗಳ ವಿವರ ಹೀಗೆ ತಿಳಿಸಿದ್ದಾರೆ.

೧) ನಗೆಯ ಮೂಲ

೨) ನಗು–ಅಳು

೩) ನಗೆಯ ಬಗೆ

೪) ನಗೆಯ ಸ್ವರೂಪ

೫) ನಗೆ–ಮುಗುಳುನಗೆ

೬) ಕಚಕುಳಿ

ರಸಕ್ಕೆ ಮೂಲ ಸ್ಥಾಯೀಭಾವ ಎಂದು ಭರತಾದಿ ಆಚಾರ್ಯರೆಲ್ಲರೂ ಹೇಳಿರುವರು. ಅವರ ಅಭಿಪ್ರಾಯದಂತೆ ಹಾಸ್ಯರಸಕ್ಕೆ ಸ್ಥಾಯಿಯಾದದು ಹಾಸಭಾವ. 'ಹಾಸ' ಶಬ್ಧವು ಹಸ್ ಣಂಟಿಂಣಾಝ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಜೀವನದಲ್ಲಿದ್ದ ಈ ಹಾಸಭಾವವೇ ಸಾಹಿತ್ಯದಲ್ಲಿ ರೂಪುಗೊಂಡು ಸಹೃದಯರಲ್ಲಿ ಹಾಸ್ಯರಸವಾಗಿ ಪರಿಣಮಿಸುತ್ತದೆ. ಆದುದರಿಂದ ಹಾಸ್ಯರಸ ವಿವೇಚನೆಗೆ ಹೊರಟವರು ಹಾಸ್ಯದ ಅಂದರೆ ನಗೆಯ ವಿಷಯವಾಗಿ ವಿಚಾರ ಮಾಡ ಬೇಕಾಗುತ್ತದೆ.

ನಗೆಯ ಮುಖ್ಯ ಮುಖ್ಯ ಪ್ರಮೇಯಗಳ ವಿವೇಚನೆಯನ್ನು ಈ ಭಾಗದಲ್ಲಿ ಮಾಡಲಾಗಿದೆ. ನಗೆ ಶಾರೀರಿಕ (Physiological) ಮತ್ತು ಮಾನಸಿಕ (Psychological) ಇವೆರಡಕ್ಕೂ ಸಂಬಂಧಪಟ್ಟದಾಗಿದೆ. ನಗೆಯ ವಿಷಯದಲ್ಲಿ ಈ ಎರಡೂ ಬಗೆಯ ವಿಚಾರ ಪ್ರಣಾಲಿ ಪಾಶ್ಚಾತ್ಯದಲ್ಲಿ ಪ್ರಕಟವಾಗಿದೆ.

ಈ ಪ್ರಬಂಧದ ೨ನೇಯ ಭಾಗದಲ್ಲಿ ರಸ, ಹಾಸ್ಯರಸ ಮತ್ತು ಹಾಸ್ಯ (ಊಣಟಿಂಣಡಿ) ವನ್ನು ಕುರಿತು ವಿವೇಚಿಸಲಾಗಿದೆ. ಈ ಭಾಗದಲ್ಲಿ ಹೀಗೆ ವಿಭಾಗಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

೧) ರಸ

 ISBN Number: 978-93-342-6162-2

೨) ಹಾಸ್ಯರಸ

೩) ವಿಡಂಬನೆ

೪) ವಿಡಂಬನೆಯ ಪ್ರಕಾರಗಳು

೫) ಹಾಸ್ಯ ಸಾಮಗ್ರಿ

೬) ಹಾಸ್ಯ ಶೈಲಿ

ಹಳೆಗನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯ, ಹೊಸಗನ್ನಡ ಸಾಹಿತ್ಯದ ಮೇಲೆ ಆಂಗ್ಲ ಸಾಹಿತ್ಯ ತಮ್ಮ ಪ್ರಭಾವ ಬೀರಿದೆ. ಹೊಸಗನ್ನಡ ಸಾಹಿತ್ಯದಲ್ಲಂತೂ ಆಂಗ್ಲರ ಹಾಸ್ಯ ಪ್ರಭಾವ ಹಾಸುಹೊಕ್ಕಾಗಿದೆ. ಸಾಹಿತ್ಯ ನಮ್ಮ ನಿತ್ಯ ಜೀವನಕ್ಕೆ ಸಮೀಪವರ್ತಿಯಾಗುತ್ತ ಬಂದಂತೆ ಹಾಸ್ಯ ಹೆಚ್ಚಾಗುತ್ತಾ ಬಂದಿದೆ ಎಂಬುದು ಎಂ.ಎಸ್. ಸುಂಕಾಪುರರವರ ಅಭಿಪ್ರಾಯ.

ಅಧ್ಯಯನ ಉದ್ದೇಶ & ಅಗತ್ಯ :

ಇವರು ಈ ಅಧ್ಯಯನದ ಉದ್ದೇಶ ಮತ್ತು ಅಗತ್ಯತೆಯ ಬಗ್ಗೆ ತಮ್ಮದೇ ಆದ ಶೈಲಿಯಲ್ಲಿ ವಿವರಿಸಿದ್ದಾರೆ. ಹಾಸ್ಯ (ನಗು) ದೇಹದ ಪಂಚ ಘಟಕಗಳನ್ನು ಒಳಗೊಂಡಿದೆ. ಅದರ ಉದ್ದೇಶ ತಿಳಿಯಬೇಕಾದರೆ ಪಂಚ ಘಟಕಗಳ ಪರೀಕ್ಷೆ ನಡೆಯಬೇಕು. ಅವು ಯಾವುವೆಂದರೆ :

೧) ನಗುವ ವ್ಯಕ್ತಿ

೨) ನಗೆಯ ವಸ್ತು

೩) ನಗೆಗೆ ಕಾರಣ

೪) ನಗೆಯ ಪ್ರಯೋಜನ

೫) ನಗೆಯ ಪರಿಣಾಮ

ಇವುಗಳ ಸಮನ್ವಯದಲ್ಲಿ ನಗೆಯ ಸ್ವರೂಪ–ಉದ್ದೇಶ ಎದ್ದು ಕಾಣುವುದು. ನಗೆ ಐಕ್ಯತೆಯಲ್ಲಿ ಭಿನ್ನತೆಯನ್ನೂ ಭಿನ್ನತೆಯಲ್ಲಿ ಐಕ್ಯತೆಯನ್ನೂ ವ್ಯಕ್ತಪಡಿಸುತ್ತದೆ.

ಹಾಸ್ಯ–ನಗೆಯು ಒಂದು ಶಾರೀರಿಕ–ತಂತ್ರವೆಂದು ಅವನ ಧೃಢವಾದ ನಂಬಿಕೆ. 'ಉಸಿರಾಡಿಸಲು ಉಪಯೋಗಿಸುವ ನರನಾಡಿಗಳ ಮತ್ತು ಮುಖದಲ್ಲಿರುವ ಸ್ನಾಯುಗಳ ಅಸಮಂಜಸ ಚಲನವಲನ ಕಾರ್ಯವೇ ಹಾಸ್ಯ, ನಗೆ ಇದು ಮಾನಸಿಕ ಬಿಗುವನ್ನು ಸರಿಪಡಿಸುವುದೆಲ್ಲ ನಗೆಯ ಕಾರ್ಯ. ಒಟ್ಟಿನಲ್ಲಿ ಮಾನಸಿಕ ಚೈತನ್ಯವು ಹೊರಚೆಲ್ಲಿ ನರನಾಡಿಗಳಲ್ಲಿ ಹರಿದು, ಮುಖದಲ್ಲಿ ನಿಲ್ಲುವುದೇ ನಗೆಯೆಂದು ಸ್ಪೆನ್ಸರನ ಸ್ಪಷ್ಟ ಅಭಿಪ್ರಾಯ.

 ISBN Number: 978-93-342-6162-2

ಶಾರೀರಿಕ ನಗೆಯನ್ನು ಕುರಿತು ವಿಚಾರ ಮಾಡಿದ ಮಹನೀಯರು ಇನ್ನೂ ಅನೇಕರಿದ್ದಾರೆ ಅವರೆಲ್ಲರೂ ಮಿಡಿಯುವುದು ಒಂದೇ ತಂತಿ. ಹಾಡುವುದು ಒಂದೇ ರಾಗ. ಎಲ್ಲಾ ಶಾರೀರಿಕ ಶಾಸ್ತ್ರಜ್ಞರು ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದಾರೆ. ನಾವೆಲ್ಲರೂ ಯಾವ ತರಹ ಶಿಕ್ಷಣ ಇಲ್ಲದೆ ಒಂದೇ ರೀತಿಯಾಗಿ ನಗುವುದಿಲ್ಲವೇ ಹಾಗಾದರೆ. ನಗುವಿನ ಸಲುವಾಗಿಯೇ ಪ್ರಕೃತಿಯು ಇಂತಹದೊಂದು ಆಗಾಧ ರಚನೆಯನ್ನು ನಿರ್ಮಿಸಿತೇ? ಹಾಗಿದ್ದರೆ, ಪ್ರಕೃತಿ ಧರ್ಮಕ್ಕನುಗುಣವಾಗಿ ಇಂತಹ ಜಟಿಲವಾದ ಸ್ನಾಯುಗಳ ಸಂಘಟನೆ ಅನ್ಯಪ್ರಾಣಿಗಳಲ್ಲಿಯೂ ಇರಬೇಕಾಗಿತ್ತಲ್ಲವೇ. ಇದ್ದರೆ, ಮಾನವನಂತೆ ಅವು ಏಕೆ ನಗುವುದಿಲ್ಲ ? ಮಾನವನು ಕಾರ್ಯ ನಿರತನಾದಾಗ ಸ್ನಾಯುಗಳ ಚಟುವಟಿಕೆ ತನ್ನಷ್ಟಕ್ಕೆ ತಾನೇ ಸ್ವಾಭಾವಿಕವಾಗಿ ನಡೆಯುತ್ತದೆ ಎಂಬುದನ್ನು ಅರಿವು ಮೂಡಿಸುವುದಾಗಿದೆ ಎಂದಿದ್ದಾರೆ ಅಷ್ಟೇ ಅಲ್ಲ.

ಭಾರತೀಯ ತತ್ವ ವಿವೇಚನೆಯಲ್ಲಿ ಹಾಸ್ಯಕ್ಕೆ ಯೋಗ್ಯ ಸ್ಥಾನವನ್ನು ಕಲ್ಪಿಸಿದ್ದರೂ ಅವರ ಸಾಹಿತ್ಯದಲ್ಲಿ ಅದಕ್ಕೆ ಗೌಣಸ್ಥಾನವಿದೆಯೆಂದೇ ಹೇಳಬೇಕಾಗುತ್ತದೆ. ವೀರ, ಕರುಣ, ಶೃಂಗಾರ ಇವು ಪ್ರಧಾನ ರಸಗಳೆಂದೂ ಮಹಾಕಾವ್ಯಕ್ಕೆ ಇವುಗಳಲ್ಲಿ ಅವ್ಯದೊಂದು ಅವಶ್ಯವಾಗಿ ಇರಲೇಬೇಕೆಂದೂ ಕಚ್ಚು ಹಾಕಿದ ಅಲಂಕಾರಿಕರು ಅಷ್ಟೇ ಮಹತ್ವದ ಸ್ಥಾನವನ್ನು ಹಾಸ್ಯಕ್ಕೆ ಅಂತೆಯೇ ಇನ್ನುಳಿದ ರಸಗಳಿಗೆ ಕೊಟ್ಟಿಲ್ಲವೆಂಬುದು ಸುಸ್ಪಷ್ಟ ಧರ್ಮದ ಆಶ್ರಯದಲ್ಲಿ, ತಾತ್ವಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಭಾರತೀಯರ ಜೀವನ, ಅಂತೆಯೇ ಸಾಹಿತ್ಯ ಗಂಭೀರ ಸ್ವರೂಪವನ್ನು ತಳೆದುದೂ ಹೆಚ್ಚು ವಿಚಾರ ಪ್ರಧಾನವಾದದೂ – ಸ್ವಾಭಾವಿಕವಾಗಿದೆ. ಅವರ ಸಾಹಿತ್ಯ ರಸಪ್ರವಾಹದಲ್ಲಿ ಹಾಸ್ಯದ ಹೊನಲು ಕಡಿಮೆಯೆಂದೇ ಹೇಳಬೇಕು.

ಕನ್ನಡ ಜನ ಹಾಗೂ ಸಾಹಿತ್ಯ ಭಾರತೀಯ ಹಿನ್ನೆಲೆಯಲ್ಲಿ ಮುನ್ನೆಡೆದುದರಿಂದ ಈ ಸಾಮಾನ್ಯ ನಿಯಮಕ್ಕೆ ಅಪವಾದವಾಗಿಲ್ಲ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಶೃಂಗಾರ, ವೀರ, ಕರುಣಗಳಂತೆ ಹಾಸ್ಯಕ್ಕೆ ಪ್ರಧಾನ ಪಟ್ಟ ಸಂದಿಲ್ಲವೆಂಬುದು ಸುಸ್ಪಷ್ಟ. ಆದರೆ ಕನ್ನಡ ನಾಡವರು ಕುಲರಸಿಕರು, ಚದುರರು, ವಿನೋದ ಪ್ರಿಯರು, ಸಂಪ್ರದಾಯದ ಬಿಗಿತದಲ್ಲಿ ಹಾಸ್ಯರಸಕ್ಕೆ ಸಾಹಿತ್ಯದಲ್ಲಿ ಹಿರಿಯ ಸ್ಥಾನ ಸಲ್ಲದಿದ್ದರೂ ಅಲ್ಲಲ್ಲಿ ಅದರ ಝಳಕು ಹೊಳಪು ಕಾಣುವುದಿಲ್ಲ. ಅಂತೆಯೇ ಕನ್ನಡ ಸಾಹಿತ್ಯ ಸಮೀಕ್ಷಕರು ಅಂತಹ ಘಟ್ಟಗಳನ್ನು ಸಮೀಕರಿಸಿ ವಿಮರ್ಶಿಸುವುದು ಅತ್ಯವಶ್ಯಕವಾಗಿದ್ದಿತ್ತು. ಪ್ರಾಚೀನ ಸಾಹಿತ್ಯದಲ್ಲಿದ್ದ ಹಾಸ್ಯದ ಸ್ವರೂಪವನ್ನು ಗುರುತಿಸಿ ವಿಮರ್ಶಿಸುವುದರ ಜೊತೆಗೆ ಆಧುನಿಕ ಸಾಹಿತ್ಯದಲ್ಲಿ ವಿಫುಲವಾಗಿ ಬೆಳೆದು ಬಂದ ಅದರ ಸತ್ವವನ್ನು ಎತ್ತಿತೋರಿಸುವುದು ಅಷ್ಟೇ ಅವಶ್ಯವಾಗಿದ್ದಿತ್ತು ಎಂಬುದು ಇವರ ದಿಟ್ಟ ನಿಲುವು.

ಈ ಪ್ರಬಂಧದ ಪೂರ್ವಾರ್ಧದಲ್ಲಿ ತತ್ವ ವಿವೇಚನೆಯಿದೆ. ಪೌರಸ್ತ್ಯ ಹಾಗೂ ಪಾಶ್ಚಾತ್ಯದ ದೃಷ್ಠಿಯಲ್ಲಿ ಹಾಸ್ಯ ತತ್ವವನ್ನು ಕುರಿತು ಆಳವಾಗಿ ವಿವೇಚಿಸಲಾಗಿದೆ. ನಗೆ ಎಂದರೇನು. ಅದರ ಮೂಲವೆಲ್ಲಿ, ಅದರ

 ISBN Number: 978-93-342-6162-2

ಸ್ವರೂಪವೇನು ಎಂಬ ಮಹತ್ವದ ಸಮಸ್ಯೆಗಳನ್ನು ಲೇಖಕರು ಲೌಕಿಕವಾಗಿ ವಿವೇಚಿಸಿ ಅತ್ಯಂತ ಸಮರ್ಪಕವಾದ ಉತ್ತರವೆನ್ನಿತ್ತಿರುವರು. ಇದು ಕನ್ನಡದಲ್ಲಿ ಹಾಸ್ಯರಸದ ಸಮಗ್ರ ವಿವೇಚನೆಯನ್ನು ಒದಗಿಸುವ ಶ್ರೇಷ್ಠವಾದ ಗ್ರಂಥ ತೂಕಬದ್ಧವಾದ ವಿವೇಚನೆ ಮೂಲ ಸ್ವರೂಪವನ್ನು ಕಂಡು ಹಿಡಿಯುವ ಚಿಕಿತ್ಸೆ ಸುಂದರವಾದ ಶೈಲಿ ಇವುಗಳಿಂದ ಕನ್ನಡಕ್ಕೆ ಇದೊಂದು ಉನ್ನತವಾದ ಕಾಣಿಕೆ ಎಂದು ಧೈರ್ಯದಿಂದ ಹೇಳಬಲ್ಲೆ ಎಂದಿದ್ದಾರೆ.

ಉತ್ತರಾರ್ಧವೂ ಅಷ್ಟೇ ಮಹತ್ವವುಳ್ಳದು. ಇದಕ್ಕೆ ಗಂಡಬೇರುಂಡನಂತೆ ಎರಡು ಮುಖಗಳಿವೆ. ಒಂದು ಅನುಷ್ಪಂಗಿಕವಾಗಿ ಅಲ್ಲಿ ಪೂರೈಸಲಾದ ಕನ್ನಡ ಸಾಹಿತ್ಯದ ನಿರೀಕ್ಷೆ (ಖಣಾಡಿತಜಥಿ) ಎರಡನೆಯದು ಅತಿ ಮುಖ್ಯವಾದುದು ಅಲ್ಲಿರುವ ಹಾಸ್ಯರಸದ ಸಮೀಕ್ಷೆ ಬಹು ಸೂಕ್ಷ್ಮವಾದ ದೃಷ್ಟಿಯಿಂದ ಪ್ರಾಚೀನ ಕನ್ನಡ ಸಾಹಿತ್ಯದ ಪುಟಪುಟಗಳನ್ನು, ಪದಪದಗಳನ್ನು ಮಗಚಿ ಅಲ್ಲ ಹುದುಗಿರುವ ಹಾಸ್ಯದ ಕಿರಣಗಳನ್ನು ಡಾ. ಸುಂಕಾಪುರ ಅವರು ಪ್ರಥಮತಃ ಬಯಲಿಗೆ ತಂದಿರುವರು ಬೆಲೆ ಕಟ್ಟಿರುವರು.

ಕನ್ನಡ ಸಾಹಿತ್ಯದ ರಸಾಸ್ವಾದನೆಗೆ ವಿಶೇಷವಾದ ಸಹಾಯವನ್ನು ಮಾಡಿರುವರು. ಮಾರನೆಯ ಹಾಗೂ ಅತ್ಯಂತ ಮಹತ್ವದ ಅಂಶವೆಂದರೆ ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದುದು. ಸಮಕಾಲೀನ ಸಾಹಿತ್ಯವನ್ನು ಒರೆಹಚ್ಚುವ ಕಾರ್ಯ ಸುಲಭವಾದುದಲ್ಲ. ಡಾ. ಸುಂಕಾಪುರ ಅವರು ಜೋಕೆ–ತೂಕಗಳಿಂದ ಆಧುನಿಕ ಕನ್ನಡ ಸಾಹಿತ್ಯ ವಿವಿಧ ರೂಪಗಳನ್ನು–ಭಾವಗೀತೆ ಮೊದಲು ಮಾಡಿ ಪತ್ರಿಕಾ ಸಾಹಿತ್ಯದವರೆಗಿನ ಎಲ್ಲಾ ರೂಪಗಳನ್ನು ಅರಿದು, ಅರೆದು, ಒರೆಗೆ ಹಚ್ಚಿ ಅಲ್ಲಿ ಬಂದಿರುವ ಸುಂದರವಾದ ಹಾಸ್ಯರಸದ ತೆರೆತೆರೆಗಳನ್ನು ಎತ್ತಿ ತೋರಿಸಿರುವರು ಮಾರ್ಮಿಕವಾದ ವಿಮರ್ಶೆಯನ್ನು ಮಾಡಿರುವರು. ಹೀಗೆ ಈ ಬಗೆಗೆ ಸರ್ವಾಂಗ ಸುಂದರವಾದ ಗ್ರಂಥ ಕನ್ನಡದಲ್ಲಿ ಮೊತ್ತ ಮೊದಲು ಪ್ರಕಟವಾಗುತ್ತದೆ. ಇದರ ಘನತೆ, ಅಂದ, ಚಂದಗಳನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ, ಕನ್ನಡಕ್ಕೆ ಇಂತಹ ಅಮೂಲ್ಯವಾದ ಕಾಣಿಕೆಯನ್ನು ನೀಡಿ ಡಾ. ಸುಂಕಾಪುರ ಅವರು ಕೃತಾರ್ಥರಾಗಿರುವರು.

ಇವರ ಮುಖ್ಯ ಅಭಿಪ್ರಾಯ ಹೀಗಿದೆ :

ನಾಟಕ, ಜಾನಪದ, ಸಂಶೋಧನ ಮತ್ತು ಸಂಪಾದನ ಕ್ಷೇತ್ರಗಳಲ್ಲಿ ಅಚ್ಚಳಿಯದ ಕೆಲಸ ಮಾಡಿದ ವಿದ್ವಾಂಸರಲ್ಲಿ ಡಾ. ಎಂ.ಎಸ್. ಸುಂಕಾಪುರ ಅವರದ್ದು ಗಣ್ಯ ಹೆಸರು. ಯಾವುದನ್ನೂ ಬಯಸದೆ, ಬಂದದನ್ನು ನಗು ನಗುತ್ತಾ ಸ್ವೀಕರಿಸಿದ “ನಗೆ ಮಾರಿ” ಎಂದೇ ಹೆಸರಾದ ಅವರ ಜೀವನ ಪ್ರೀತಿ, ನಿರಪೇಕ್ಷ ಭಾವ, ಸಹಾಯಗುಣ ಅಮೋಘವಾದವು. ಡಾ. ಆರ್.ಸಿ. ಹಿರೇಮಠ ಅವರ ಒಡನಾಡಿಗಳಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ಬಹುಮುಖವಾಗಿ ದುಡಿದಿದ್ದಾರೆ.

 ISBN Number: 978-93-342-6162-2

'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ವಿಷಯದ ಮೇಲೆ ಪಿ.ಹೆಚ್.ಡಿ. ಅಧ್ಯಯನ ಪೂರೈಸಿದ ಅವರು ಅನೇಕ ನಾಟಕಗಳನ್ನು ರಚಿಸಿದ ಸೃಜನಶೀಲರು, ಜಾನಪದ–ಸಂಗ್ರಹ ಮತ್ತು ಪ್ರಕಟಣೆ ಅವರಿಂದಲೇ ಉತ್ತರ ಕರ್ನಾಟಕ ಭಾಗದಲ್ಲಿ ಕಣ್ಣು ತೆರೆಯಿತು. ಎನ್ನುವಷ್ಟರ ಮಟ್ಟಿಗೆ "ಜೀವನ ಜೋಕಾಲಿ" ಹೆಸರಿನ ಒಂಭತ್ತು ಸಂಪುಟಗಳ ಬಯಲಾಟ, ಕುರಿತಾಗಿ ಆರು ಗ್ರಂಥಗಳು ಅವರ ಸಂಪಾದನೆಯಲ್ಲಿ.

ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡವು 'ನಗೇಮಾರಿ' ಎಂದೇ ಹೆಸರಾಗಿದ್ದ ಡಾ.ಎಂ.ಎಸ್. ಸುಂಕಾಪುರ ಅವರು, ಹಾಸ್ಯ ರಸವನ್ನು ಕೇಂದ್ರವಾಗಿಟ್ಟುಕೊಂಡು 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಪೂರೈಸಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಪಿಸಿ ಡಾಕ್ಟರೇಟ್ ಪದವಿ ಪಡೆದದ್ದು ಒಂದು ಯೋಗಾಯೋಗ ಡಾ. ಸುಂಕಾಪುರ ಅವರ ಪದವು ಮಿತ್ರರಾಗಿದ್ದ ಘನ ವಿದ್ವಾಂಸರಾಗಿದ್ದ, ಡಾ. ಆರ್.ಸಿ. ಹಿರೇಮಠ ಅವರು ಈ ಗ್ರಂಥಕ್ಕೆ ಬೆಲೆಯುಳ್ಳ ಮುನ್ನುಡಿಯನ್ನು ಬರೆದಿದ್ದಾರೆ.

ಎಲ್ಲರಿಗೂ ಕೀಸರ–ಬೊಸರ ಮೃದುವಾಗಿ ನಗುವ ವರವು ನಮಗೆ ನೆಗಬೊಡವೆ? ಡಿ.ವಿ.ಗುಂಡಪ್ಪನವರು "ಮಂಕು ತಿಮ್ಮನ ಕಗ್ಗದಲ್ಲಿ".

"ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ, ನಗುವ ಕೇಳುತ ನಗುವುದತಿಶಯದ ಧರ್ಮ"॥ ನಗುವ ನಗಿಸುವ ನಗಿಸಿ ನಗುತ ಬಾಳುವ ವರವೇ ಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ॥ ಎಂದು ಹೇಳಿರಲು, ಅಂತಹ ವರವನ್ನು ಬೇಡಿಕೊಳ್ಳದವರಾರು?

ಕನ್ನಡ ಸಾಹಿತ್ಯದಲ್ಲಿ ಹಾಸ್ಯ :

ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಬಗ್ಗೆಯೂ ಕೂಡ ಉತ್ತಮವಾದ ವಿವರಣೆ ಸಾಹಿತ್ಯವಾಗಿ ನೀಡಿರುತ್ತಾರೆ. ಕನ್ನಡ ಸಾಹಿತ್ಯವು ಭಾರತದ ಅತ್ಯಂತ ಪ್ರಾಚೀನ ಸಾಹಿತ್ಯಗಳಲ್ಲಿ ಒಂದಾಗಿದೆ. ಸಂಸ್ಕೃತ, ತಮಿಳುಗಳಂತಹ ಒಂದೆರಡು ಸಾಹಿತ್ಯಗಳನ್ನು ಬಿಟ್ಟರೆ, ಪ್ರಾಚೀನತೆಯಲ್ಲಿ ಕನ್ನಡವನ್ನು ಸರಿಗಟ್ಟುವ ಸಾಹಿತ್ಯ ಭಾರತದಲ್ಲಿಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ದಿವ್ಯ ಪರಂಪರೆ ಇದೆ. ಇದೊಂದು ಒಳ್ಳೆಯ ಅಭಿಮಾನದಿಂದ ಹೇಳಬೇಕಾದ ಸಂಗತಿ. ಗ್ರೀಕ್ ಪ್ರಹಸನದಲ್ಲಿ ಬಂದ ಮಾತುಗಳು ಕನ್ನಡದವು–ಎಂಬ ಆಧಾರದಿಂದ ಹೀಗೆ ಹೇಳುವುದುಂಟು ಒಂದು ವೇಳೆ ಆ ಪ್ರಹಸನದಲ್ಲಿ ಬಂದ ಭಾಷೆ ಕನ್ನಡದ್ದಲ್ಲವೆಂದು ನಿರ್ಣಯವಾದರೂ ಹಲ್ಮಿಡಿಯ ಶಾಸನ (ಕ್ರಿ.ಶ. ೪೫೦) ರ ಕಾಲದಿಂದ ಕನ್ನಡ ಸಾಹಿತ್ಯವಾಹಿನಿಯು ಧಾರೆಧಾರೆಯಾಗಿ ಹರಿದು ಬಂದಿರುವುದು ಸುಸ್ಪಷ್ಟವಿದೆ. ಕವಿರಾಜ ಮಾರ್ಗ (ಕ್ರಿ.ಶ. ೮೧೪) ವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲುಗಲ್ಲೆಂಬುದನ್ನು ಸ್ಮರಿಸಿಕೊಂಡರೆ ಅದಕ್ಕೂ ಪೂರ್ವದಲ್ಲಿ, ಅನೇಕ

 ISBN Number: 978-93-342-6162-2

ಶತಮಾನಗಳವರೆಗೆ ಕನ್ನಡ ಸಾಹಿತ್ಯವು ಹದವಾಗಿ ಬೆಳೆದು ಬಂದಿರಲಿಕ್ಕೇಬೇಕು. ಗದ್ಯ–ಪದ್ಯ ಸಾಹಿತ್ಯವು ಆ ಪೂರ್ವದಲ್ಲಿಯೇ ಬೆಳೆದು ಬಂದಿತ್ತೆಂಬುದು ಕೆಳಗಣ ಪದ್ಯಗಳಿಂದ ವಿದಿತವಾಗುತ್ತದೆ.

"ಪರಮ ಶ್ರೀ ವಿಜಯ ಕವೀ ।
ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳೀ ॥
ನಿರತಿಶಯ ವಸ್ತು ವಿಸ್ತರ ।
ವಿರಚನಲಕ್ಷ್ಯಂ ತದಾದ್ಯ ಕಾವ್ಯಕ್ಕೊಂದುಂ ॥"

"ವಿಮಲೋದಯ ನಾಗರ್ಜುನ।
ಸಮೇತ ಜಯಬಂಧು ದುರ್ವಿನೀತಾದಿಗಳೀ ॥
ಕ್ರಮದೊಳ ನೆಗಳ್ಚಿ ಗದ್ಯಾ ।
ಶ್ರಮ ಪದಗುರುತಾ ಪ್ರತೀತಿಯಂ ಕೆಯ್ಕೊಂಡರ್"

ಗದ್ಯ, ಪದ್ಯ ಕ್ಷೇತ್ರಗಳೆರಡರಲ್ಲಿಯೂ ಇಷ್ಟು ಜನ ಪೂರ್ವಾಚಾರ್ಯರು ವ್ಯವಸಾಯ ಮಾಡಿರಬೇಕಾದರೆ ಅಂತಹ ಸಾಹಿತ್ಯ ಪ್ರಾಚೀನತೆಯಲ್ಲಿಯೂ ಸತ್ವದಲ್ಲಿಯೂ ನಿಜವಾಗಿ ಹಿರಿದಾಗಿರಬೇಕು ಎನ್ನುತ್ತಾರೆ.

"ಮಿಗೆ ಕನ್ನಡ ಕಬ್ಬಂಗಳೊ ।
ಳಗಣಿತಗುಣ ಗದ್ಯಪದ್ಯ ಸಮ್ಮಿಶ್ರೀತಮಂ ॥
ನಿಗದಿಸುವರ್ ಗದ್ಯಕಥಾ ।
ಪ್ರಗೀತಿಯಂ ತಬ್ಬಿರಂತರಾಚಾರ್ಯಕರ್ಪಿಳ್ ॥

ಎಂದು 'ಕವಿರಾಜ ಮಾರ್ಗವು' ತತ್ಪೂರ್ವದ ಕನ್ನಡ ಸಾಹಿತ್ಯದ ವೈವಿಧ್ಯವನ್ನು ವಿವರಿಸುತ್ತದೆ. ಚಿತ್ತಾಣ, ಬೆದಂಡೆಗಬ್ಬ, ಪಾಡು ಮೊದಲಾದ ಸಾಹಿತ್ಯ ಪ್ರಕಾರಗಳು ಅಗಲೇ ಮೈವೆತ್ತೂ, ಮುಂದುವರಿದ್ದುವೆಂಬುದು 'ಕವಿರಾಜ ಮಾರ್ಗ' ದಿಂದಲೇ ಸ್ಪಷ್ಟವಾಗುತ್ತದೆ. ಅಂದಿನಿಂದ ಇಂದಿನವರೆಗೆ ಕನ್ನಡ ಸಾಹಿತ್ಯವು ನಾನಾ ಮುಖವಾಗಿ, ನಾನಾ ಬಗೆಯಾಗಿ ಬೆಳೆಯುತ್ತ ಬಂದಿದೆ. ಇಷ್ಟೊಂದು ಭವ್ಯ ಪರಂಪರೆಯುಳ್ಳ ಕನ್ನಡ ಸಾಹಿತ್ಯವನ್ನು ಹಾಸ್ಯದ ದೃಷ್ಟಿಯಿಂದ ಅಳೆದು ನೋಡುವ ಕಾರ್ಯ ಸಣ್ಣದಲ್ಲ. ಅಭ್ಯಾಸಕ್ಕೆಂದು ಅನುಕೂಲಕ್ಕೊಂದು ಮೊದಲು ಅದರಲ್ಲಿ ಕೆಳಗಿನಂತೆ ಮೂರು ಭಾಗಗಳನ್ನು ಮಾಡಿಕೊಳ್ಳಲಾಗಿದೆ.

೧) ಪದ್ಯ ಸಾಹಿತ್ಯ

೨) ಗದ್ಯ ಸಾಹಿತ್ಯ

೩) ನಾಟಕ ಸಾಹಿತ್ಯ

 ISBN Number: 978-93-342-6162-2

ಈ ಪದ್ಯ, ಗದ್ಯ, ನಾಟಕ ಸಾಹಿತ್ಯಗಳನ್ನು ಬೇರೆ ಬೇರೆಯಾಗಿ ಎತ್ತಿಕೊಂಡು, ಅವುಗಳಲ್ಲಿ ಅಭ್ಯಾಸದ ಅನುಕೂಲಕ್ಕಾಗಿ ಸಾಹಿತ್ಯದ ಭಿನ್ನ ಭಿನ್ನ ರೂಪಗಳನ್ನು ಗುರುತಿಸಿಕೊಂಡು ಅಲ್ಲಿ ಬಂದಿರುವ ಹಾಸ್ಯವನ್ನು ಮೊತ್ತ, ಸತ್ವಗಳ ದೃಷ್ಟಿಯಿಂದ ಇನ್ನು ಮುಂದೆ ವಿಮರ್ಶಿಸಲಾಗುವುದು, ಅವುಗಳ ನೆಲೆ–ಬೆಲೆಗಳನ್ನು ಕಟ್ಟಲಾಗುವುದು ಎಂಬುದನ್ನು ಸ್ಪಷ್ಟಪಡಿಸಿರುತ್ತಾರೆ.

ಉಪಸಂಹಾರ :

ಎಂ.ಎಸ್. ಸುಂಕಾಪುರರವರು ಕನ್ನಡ ಸಾಹಿತ್ಯದಲ್ಲಿ ಹಾಸ್ಯವು ವೈವಿಧ್ಯಪೂರ್ಣವಾಗಿ ಮನೋಹರವಾಗಿ ಬೆಳೆದು ನಿಂತಿದೆ ಎಂದು ವೈಭವೀಕರಿಸಿದ್ದಾರೆ. ಸುಮಾರು ಎರಡು ಸಾವಿರ ವರ್ಷಗಳವರೆಗೆ ಅವ್ಯಾಹತವಾಗಿ ಬೆಳೆಯುತ್ತ ಬಂದಿರುವ ಕನ್ನಡ ಸಾಹಿತ್ಯದ ವಿವಿಧಾಂಗಗಳಲ್ಲಿರುವ ಹಾಸ್ಯವನ್ನು ಸಿಂಹಾವಲೋಕನಕ್ರಮದಿಂದ ಅಳೆದು, ತೂಗಿ ಅದರ ನೆಲೆ–ಬೆಲೆಗಳನ್ನು ನಿರ್ಧರಿಸಲಾಯಿತು. ಎಲ್ಲೆಲ್ಲಿಯೂ ಆಧುನಿಕ ವಿಮರ್ಶೆಯ ಹಾಗೂ ಸಂಶೋಧನೆಯ ತತ್ವಗಳನ್ನು ಆಧರಿಸಿ ನಗೆಯ ಬಗೆಯನ್ನೂ ಹಾಸ್ಯದ ಪ್ರಕಾರಗಳನ್ನೂ ಗುರುತಿಸುವ ಕಾರ್ಯ ನಡೆಯಿತು. ಹಳೆಗನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಗಣ್ಯ ಸ್ಥಾನವಿದೆ. ಹಳಗನ್ನಡ ಕವಿಗಳು ಹೇಳಬೇಕಾದುದನ್ನೆಲ್ಲ ಪದ್ಯದಲ್ಲಿಯೇ ಬರೆದಿಟ್ಟರು. ಅಲ್ಲಿ ಗದ್ಯಕಾವ್ಯಗಳಿಗೂ ನಾಟಕ ಕೃತಿಗಳಿಗೂ ಸಿಗಬೇಕಾಗಿದ್ದ ಸ್ಥಾನ ಸಿಗದೇ ಹೋಗಿದೆ. ಆದರೆ ಆಧುನಿಕ ಕನ್ನಡದಲ್ಲಿ ಪದ್ಯಕ್ಕೆಂತಲೂ ಗದ್ಯ ಕಾವ್ಯಗಳಿಗೆ, ನಾಟಕ ಸಾಹಿತ್ಯಕ್ಕೆ ಪ್ರಧಾನ್ಯ ಸಿಕ್ಕುದರ ಪರಿಣಾಮವಾಗಿ ಕನ್ನಡ ಸಾಹಿತ್ಯವು ಸಮಗ್ರ ನೋಟಕ್ಕೆ ಸರ್ವಾಂಗಸುಂದರವಾಗಿ ವೈವಿಧ್ಯಪೂರ್ಣವಾಗಿ ಮನೋಹರವಾಗಿ ಬೆಳೆದು ನಿಂತಿರುವುದು ಕಂಡು ಬರುತ್ತಿದೆ.

ಕನ್ನಡ ತಾಯಿ ಮುಗುಳ್ನಗೆ ಬೀರುತ್ತ ತಮ್ಮ ಕಣ್ಣೆದುರಿನಲ್ಲಿಯೇ ಇದ್ದುದು ಕನ್ನಡ ಪುತ್ರರಿಗೆ ಆನಂದವನ್ನೀಯದೆ ಇರದು. ಆ ತಾಯಿಯ ಮುಗುಳ್ನಗೆ ಅರಳಿ, ಅವಳ ನಗೆಯ ಬೆಳುದಿಂಗಳು ಎಲ್ಲೆಡೆಯಲ್ಲಿ ಪಸರಿಸಲೆಂದೊ "ಪಂಪ" ನಿಂದ ಹಿಡಿದು "ಕುವೆಂಪು" ವಿನ ವರೆಗೆ ಬಾಳಿದ ಕನ್ನಡ ಕವಿಗಳು ಸಾಹಿತ್ಯ ರಚನೆಗೆ ಕೈ ಹಾಕಿದರು. ಅವರ ಪ್ರಯತ್ನದ ಫಲವಾಗಿಯೇ ವಿವಿಧ ಬಗೆಯ ನಗೆಯನ್ನು ಅರಳಿಸುವ ಸರಸಹಾಸ್ಯವೂ ವಿಡಂಬನೆಯೂ ಕನ್ನಡ ಸಾಹಿತ್ಯದಲ್ಲಿ ಬೆಳೆದು ಬಂದಿದೆ.

ಇವರ ಆಕಾರ ಗ್ರಂಥಗಳು

- ಆದಿಪುರಾಣ – ಪಂಪ – ಕೆ.ಜಿ. ಕುಂದಣಗಾರ
- ಪಂಪ ಭಾರತ – ಪಂಪ – ಬೆಳ್ಳಾವೆ ವೆಂಕಟನಾರಾಯಣಪ್ಪ
- ಗದಾಯುದ್ಧ – ರತ್ನ – ಕೆ.ವಿ. ಕೃಷ್ಣಭಟ್ಟ

 ISBN Number: 978-93-342-6162-2

- ❖ ಯಶೋಧಚರಿತೆ – ಜನ್ನ – ಡಿ. ಶ್ರೀನಿವಾಸಾಚಾರ್
- ❖ ಶಬರ ಶಂಕರವಿಳಾಸ – ಷಡಾಕ್ಷರಿ – ಭಾರತೀಯ ಸಂಪಂಗಿರಾವ್
- ❖ ಸೋಮನಾಥ ಚರಿತೆ – ರಾಘವಾಂಕ – ಬಿ.ಬಸವರಾಧ್ಯ
- ❖ ಶಿಶುನಾಳ ತತ್ವಪದಗಳು – ಶಿಶುನಾಳ ಶರೀಫ ಸಾಹೇಬರು – ಎ.ಆರ್. ಶಿವನಾಗಪ್ಪ
- ❖ ಪುರಂದರದಾಸರ ತತ್ವಗಳು – ಪುರಂದರದಾಸರು – ಶ್ರೀಕಂಠಶಾಸ್ತ್ರಿಗಳು
- ❖ ಶ್ರೀ ರಾಮಾಯಣ ದರ್ಶನಂ – ಕುವೆಂಪು – ಕಾವ್ಯಾಲಯ ಪ್ರಕಟನೆ